ಸಂಪುಟ/Volume : 44
ಸಂಚಿಕೆ/Issue : 9
ಪುಟ/Pages : 12
ಬೆಲೆ/Price : ₹ 10/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಜೂನ್ 2022 ಮಾಸ ಪತ್ರಿಕೆ

Akhila Karnataka Shikshaka Samachar | June 2022 | Monthly




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

**ಯೋಗೇನ ಚಿತ್ತಸ್ಯ ಪದೇನ ವಾಚಾಂ**

**ಮಲಂ ಶರೀರಸ್ಯ ಚ ವೈದಕೇನ**

**ಯೋಪಾ ಕರೋತ್ತಂ ಪ್ರವರಂ ಮುನೀನಾಂ**

**ಪತಂಜಲಿಂ ಪ್ರಾಂಜಲಿರಾನತೋಸ್ಮಿ**

ಯೋಗದಿಂದ ಚಿತ್ತವನ್ನೂ, ಪದಗಳಿಂದ ಮಾತನ್ನೂ, ವೈದ್ಯಕೀಯದಿಂದ ಶರೀರದ ಕಲ್ಮಶಗಳನ್ನು ಶುಚಿಗೊಳಿಸುವ ವಿವರಗಳನ್ನು ತಿಳಿಸಿಕೊಟ್ಟ ಪತಂಜಲಿ ಮುನಿಗೆ ಕೈ ಮುಗಿಯುವೆ – ಎಂಬ ಶ್ಲೋಕವೊಂದಿದೆ. ಅಂದರೆ ಯೋಗ ದೇಹಾರೋಗ್ಯಕ್ಕೆ ಮಾತ್ರವಲ್ಲ ಮಾನಸಿಕ ಆರೋಗ್ಯಕ್ಕೂ ರಹದಾರಿ ಎಂಬುದು ಇಲ್ಲಿ ವೇದ್ಯವಾಗುತ್ತದೆ. ಯೋಗ ಶರೀರ ಮತ್ತು ಉಸಿರಾಟ ಕ್ರಿಯೆಯನ್ನು ಸಮತೋಲನದೊಂದಿಗೆ ಬಳಸಿಕೊಂಡು ಆರೋಗ್ಯದಿಂದ ಆಧ್ಯಾತ್ಮದೆಡೆಗೆ ಕರೆದೊಯ್ಯುವ ವಿದ್ಯೆ. ಲೌಕಿಕದಲ್ಲೇ ಅಲೌಕಿಕ ಆನಂದ ನೀಡುವ ವಿದ್ಯೆ.

ಅಂತರಾಷ್ಟ್ರೀಯ ಯೋಗ ದಿನಾಚರಣೆಯ ವಿಶೇಷತೆ: ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕರಡು ಪ್ರಸ್ತಾವನೆಯನ್ನು 2014 ಡಿಸೆಂಬರ್‌ನಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ಭಾರತದ ಖಾಯಂ ಪ್ರತಿನಿಧಿಯಾಗಿರುವ ಅಶೋಕ್ ಕುಮಾರ್ ಮಂಡಿಸಿದ್ದರು. ವಿಶ್ವಸಂಸ್ಥೆಗೆ ಇದು ಐತಿಹಾಸಿಕ ಕ್ಷಣವಾಗಿದ್ದು, ಅದರ ಸದಸ್ಯ ರಾಷ್ಟ್ರಗಳು ಅಭೂತಪೂರ್ವ ಬೆಂಬಲ ಸೂಚಿಸಿದ್ದರು. ವಿಶ್ವಸಂಸ್ಥೆಯ 193 ರಾಷ್ಟ್ರಗಳ ಪೈಕಿ 177 ದೇಶಗಳು ಅನುಮೋದನೆಯನ್ನು ನೀಡಿದ್ದವು. 2015 ಜೂನ್ 21 ರಂದು ಮೊದಲ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

**ಜೂನ್ 21 ರಂದೇ ಯೋಗ ದಿನಾಚರಣೆ ಏಕೆ ?**

ಜೂನ್ 21 ವರ್ಷದಲ್ಲಿ ಉತ್ತರ ಗೋಳಾರ್ಧದ ಅತಿ ಉದ್ದದ ಹಾಗೂ ದಕ್ಷಿಣ ಗೋಳಾರ್ಧದ ಅತಿ ಚಿಕ್ಕ ದಿನವನ್ನು ಅಂತರಾಷ್ಟ್ರೀಯ ಯೋಗ ದಿನಾಚರಣೆಗೆ ಆಯ್ಕೆ ಮಾಡಲಾಗಿದೆ. ಈ ದಿನವನ್ನು ಬೇಸಿಗೆ ಆಯನ ಸಂಕ್ರಾಂತಿ ದಿನವೆಂದು ಅಂದರೆ ವರ್ಷದಲ್ಲಿನ ಅತ್ಯಂತ ಹೆಚ್ಚು ಹಗಲುಳ್ಳ ದಿನವೆಂದು ಕರೆಯಲಾಗುತ್ತದೆ. ಯೋಗದ ದೃಷ್ಟಿಕೋನದಲ್ಲಿ ಇದು ಅತ್ಯಂತ ಹೆಚ್ಚು ಮಹತ್ವ ಪಡೆದಿದೆ. ಇದು ದಕ್ಷಿಣಯಾನಕ್ಕೆ ಪರಿವರ್ತನೆ ಎಂದು ಗುರುತಿಸಲಾಗುತ್ತದೆ. ದಕ್ಷಿಣ ಯಾನವನ್ನು ಆಧ್ಯಾತ್ಮಿಕ ಅಭ್ಯಾಸಗಳಿಗೆ ನೈಸರ್ಗಿಕ ಬೆಂಬಲವೆಂದು ಪರಿಗಣಿಸಲಾಗುತ್ತದೆ. ಆದಿ ಕಾಲದಲ್ಲಿ ಸೂರ್ಯಾಭಿಮುಖವಾಗಿ ದೃಷ್ಟಿ ನೆಟ್ಟರೆ ದಿವ್ಯ ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ ಎಂದು ನಂಬಲಾಗಿದೆ. ಅಲ್ಲದೇ ಜೂನ್ 21 ಉತ್ತರ ಗೋಳಾರ್ಧದ ವರ್ಷದ ಅತಿ ದೀರ್ಘವಾದ ದಿನವಾಗಿದೆ.

---

ಹೆಚ್.ಎಂ.ಆರ್.ಎಸ್‌ನಿಂದ ಎಲ್ಲಾ ಶಿಕ್ಷಕರಿಗೂ ವೇತನದ ಮಾಹಿತಿ ಜೂನ್ 2022 ರಿಂದ ಸಿಗಲಾರಂಭಿಸಿದೆ. ಎಲ್ಲಾ ಶಿಕ್ಷಕರಿಗೂ ವೇತನದ ಮಾಹಿತಿ ತಮ್ಮ ಮೊಬೈಲ್‌ನಲ್ಲಿಯೇ ದೊರಕುವುದರಿಂದ ಬಹಳ ಅನುಕೂಲವಾಗುತ್ತದೆ. ಈ ಅನುಕೂಲ ಮಾಡಿಕೊಟ್ಟ ಹೆಚ್.ಆರ್.ಎಂ.ಎಸ್ ಕಾರ್ಯವನ್ನು ಶ್ಲಾಘಿಸುತ್ತಾ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಧನ್ಯವಾದ ಅರ್ಪಿಸುತ್ತದೆ.

---

**ಗುರುವಂದನೆ**

ಈ ವರ್ಷ ಜುಲೈ 13 ಬುಧವಾರದಂದು ಗುರು ಪೂರ್ಣಿಮೆ. ಅಂದು ಶಾಲೆಯಲ್ಲಿ ಸಭಾ ಕಾರ್ಯಕ್ರಮವನ್ನು ಏರ್ಪಡಿಸಿ ಸಮಾರಂಭಕ್ಕೆ ಸೂಕ್ತವಾದ ಅತಿಥಿಗಳನ್ನು ಆಹ್ವಾನಿಸಿ ವೇದವ್ಯಾಸರು ಹಾಗೂ ಅಂತಹ ಹಲವಾರು ಮಹನೀಯರ ಸಾಧನೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸಬಹುದು. ಗುರುವಂದನಾ ದಿನದಂದು ನಮ್ಮನ್ನು ರೂಪಿಸಿದ ಗುರುಗಳನ್ನು ಸ್ಮರಿಸುವುದು ತುಂಬ ಅಗತ್ಯ. ಹಾಗೆ ನೋಡಿದರೆ ಪ್ರತಿನಿತ್ಯವೂ ಗುರುಗಳನ್ನು ಸ್ಮರಿಸುವುದು ಉತ್ತಮ ಅಭ್ಯಾಸ. ಶಿಕ್ಷಕರಾದ ನಾವು ಈ ಅಭ್ಯಾಸವನ್ನು ಪ್ರಾರಂಭಿಸಿ ನಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಬಹುದಲ್ಲವೇ?

ಗುರುವಂದನಾ ದಿನದಂದು ಕಾರ್ಯಕ್ರಮ ಮಾಡಿದ ವರದಿಯನ್ನು ಮತ್ತು ಫೋಟೋವನ್ನು ತಕ್ಷಣ ಕೇಂದ್ರ ಕಛೇರಿಗೆ ಕಳುಹಿಸುವುದು.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಸರ್ವಕಲೆಗಳ ಬುನಾದಿ ಯೋಗ 3
- ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ SSSA ಪಾತ್ರದ ಬಗ್ಗೆ NEP–2020 ಹೇಳಿದ್ದೇನು? 4
- ಗುರುವಂದನೆ – ಏಕೆ ? ಹೇಗೆ? 5
- ಪರಿಸರ ಮಾಲಿನ್ಯವೆಂದರೇನು? 6
- ಪ್ಲಾಸ್ಟಿಕ್ ಉಪಯೋಗ ಮತ್ತು ನಿರ್ವಹಣೆ 7
- "ನನ್ನ ಶಾಲೆ ನನ್ನ ತೀರ್ಥಕ್ಷೇತ್ರ" 8
- ವಿದ್ಯಾರ್ಥಿ ಮಿತ್ರ 10
- ಪಠ್ಯಪುಸ್ತಕ – ಏಕೆ ಬೇಕು? 11
- ಚಿತ್ರ ಸುದ್ದಿ 12

# ಸರ್ವಕಲೆಗಳ ಬುನಾದಿ ಯೋಗ

**ಡಾ|| ಶ್ರೀವಳ್ಳಿಟಿ ಎನ್**
**ಬೆಂಗಳೂರು**



ಮಾನವ ಕುಲಕ್ಕೆ ಅತ್ಯಂತ ಉಪಯುಕ್ತವಾದ ಹಲವಾರು ವಿಷಯಗಳನ್ನು ನಮ್ಮ ಸನಾತನ ಧರ್ಮ ನೀಡಿದೆ. ಅವುಗಳಲ್ಲಿ ಯೋಗವೂ ಒಂದು. ಪ್ರಕೃತಿಯು ಮಾನವನ ಆದಿಗುರು. ಯೋಗವೂ ಜ್ಞಾನದ ಒಂದು ಶಾಖೆ. ಪ್ರಕೃತಿಯಲ್ಲಿನ ಬೆಟ್ಟ, ಗುಡ್ಡ, ಗಿಡ, ಮರ, ಪ್ರಾಣಿ, ಪಕ್ಷಿ ಇವುಗಳೆಲ್ಲದರ ಚಲನ-ವಲನಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ ನಮ್ಮ ಸನಾತನರು 'ಯೋಗ' ವೆಂಬ ಮಹಾವಿದ್ಯೆಯನ್ನು ಮನುಕುಲಕ್ಕೆ ಸಮರ್ಪಿಸಿದರು. ಇದರಿಂದ ಸದೃಢ ಶರೀರ, ಸದೃಢ ಮನಸ್ಸನ್ನು ಹೊಂದಿ ರೋಗಮುಕ್ತ ಸುಖಮಯ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

ಈ ಒಂದು ಅದ್ಭುತವಾದ ಅತ್ಯಂತ ಉಪಯುಕ್ತವಾದ ಯೋಗಾವಿದ್ಯೆಯನ್ನು ಪ್ರಪಂಚಕ್ಕೆ ಪ್ರಚಾರ ಮಾಡುವ ನಿಟ್ಟಿನಲ್ಲಿ ಆಚರಣೆಗೆ ಬಂದಿರುವ ಈ ಯೋಗದಿನವು ಭಾರತೀಯರೆಲ್ಲರೂ ಹೆಮ್ಮೆಪಡಬೇಕಾದ ಸಂಗತಿ.

ಯೋಗದ ಕೆಲವು ಅಂಶಗಳು ನಮ್ಮ ಪ್ರಾಚೀನ ಕಲೆಗಳಲ್ಲಿ ಅಡಕವಾಗಿರುವುದನ್ನು ಗಮನಿಸಬಹುದು. ನಾಟ್ಯಕಲೆ (ಭರತನಾಟ್ಯ) ಹಾಗೂ ಪ್ರಾಚೀನ ಯುದ್ಧ ಕಲೆಯಾದ ಕಳರಿಪಯಟ್ಟುವಿನಲ್ಲಿಯೂ ಯೋಗ ಹೇಗೆ ಮಿಳಿತಗೊಂಡಿದೆ ಎಂಬ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವುದು ಈ ಲೇಖನದ ಉದ್ದೇಶ.

**ಭರತನಾಟ್ಯ:** ನಾಟ್ಯ ಕಲೆಯ ಆರಂಭದಲ್ಲಿಯೇ ಕೆಲವು ಅಂಗಸಾಧನೆಗಳನ್ನು ಅಭ್ಯಾಸ ಮಾಡಿಸುತ್ತಾರೆ. ಶರೀರದ ಸರ್ವಾಂಗಗಳನ್ನೂ ಬಳಸಿ ಮಾಡಬೇಕಾಗಿರುವ ಈ ಕಲೆಗೆ ಇದು ಅತ್ಯಂತ ಅಗತ್ಯ ಕೂಡ.

1. ತಾಡಕ್ರಿಯೆ 2. ಜಾನು(ಮಂಡಿ) ಕ್ರಿಯೆ 3. ಅರಮಂಡಿ ಕ್ರಿಯೆ 4. ಅರ್ಧಕಟಿ ಕ್ರಿಯೆ 5. ವೃಕ್ಷಾಸನ 6. ಬದ್ಧಕೋನಾಸನ 7. ಕಣ್ಣಿನ, ಕತ್ತಿನ ವ್ಯಾಯಾಮ ಹೀಗೆ ಇನ್ನೂ ಕೆಲವು.

ಅಭಿನಯದಲ್ಲಿ ಬಳಸುವ ಅನೇಕ ಅಸಮಯುಕ್ತ, ಸಂಯುಕ್ತ ಹಸ್ತಗಳು ಯೋಗಾಸನದ ಮುದ್ರೆಗಳೊಂದಿಗೆ ಕೊಂಚ ವ್ಯತ್ಯಾಸಗೊಂಡು ಬಳಕೆಯಾಗುತ್ತವೆ. ಕೆಲವು ಮುದ್ರೆಗಳ ಹೆಸರು ಬೇರೆ ಇರುತ್ತವೆ.

| ಉದಾ:- ಯೋಗಾಸನ | ನೃತ್ಯ |
|---|---|
| ಪ್ರಾಣಮುದ್ರೆ | ಅರ್ಧ ಪತಾಕ |
| ಸಮಾನ ವಾಯುಮುದ್ರೆ | ಮುಕುಳ |
| ವ್ಯಾನವಾಯು ಮುದ್ರೆ | ಕಟಕಾಮುಕ |
| ಧ್ಯಾನ ಮುದ್ರೆ | ಅರಾಳ |

ಇನ್ನು ಪ್ರಾಚೀನ ಯುದ್ಧ ಕಲೆಯಾದ 'ಕಳರಿಪಯಟ್ಟು' ಬಗ್ಗೆ ಹೇಳುವುದಾದರೆ ಅಭ್ಯಾಸಕ್ಕೆ ಮೊದಲು ಕೆಲವು ಯೋಗಾಸನಗಳನ್ನು ಮಾಡಬೇಕು. ಅಲ್ಲದೆ ಇದಕ್ಕೆ ಉಸಿರಿನ ನಿಯಂತ್ರಣ ಅತ್ಯವಶ್ಯಕ. ಹಾಗಾಗಿ ಯೋಗಾಸನದ ನಾಲ್ಕನೇ ಘಟಕವಾದ ಪ್ರಾಣಾಯಾಮದ ಅಭ್ಯಾಸವನ್ನು ಕೆಲಮಟ್ಟಿಗೆ ಮಾಡುವುದು ಅತ್ಯಗತ್ಯವಾಗಿದೆ. ಕಳರಿಪಯಟ್ಟುವಿನಲ್ಲಿ ಕಲಿಸುವ ಅನೇಕ ಅಭ್ಯಾಸಗಳು ಪ್ರಾಣಿಗಳನ್ನು ಅನುಕರಿಸಿಯೇ ಮಾಡುವಂಥದ್ದು. ಅಶ್ವವಡಿವು, ಗಜವಡಿವು, ಸರ್ಪವಡಿವು, ಮರ್ಜಿರ ಅಡಿವು ಇತ್ಯಾದಿ ಯೋಗಾಸನದಲ್ಲಿಯೂ ಹಲವಾರು ಆಸನಗಳು ಪ್ರಾಣಿಗಳ ಚಲನವಲನಕ್ಕೆ ಸಂಬಂಧಿಸಿದಂತಿವೆ. ಭುಜಂಗಾಸನ ಮಾರ್ಜಾಲಾಸನ, ಸಿಂಹಾಸನ ಇತ್ಯಾದಿ.

ಮನರಂಜನೆಯನ್ನು ಮುಖ್ಯ ಗುರಿಯಾಗಿಸಿಕೊಂಡಿರುವ ನೃತ್ಯ ಕಲೆಗಾಗಲೀ ಶತ್ರುಗಳನ್ನು ಎದುರಿಸಲು ಕಲಿಯುವ ಕಳರಿಪಯಟ್ಟುವಿಗಾಗಲೀ ಅಷ್ಟೇ ಏಕೆ ಶರೀರ ಸಂಬಂಧಿ ಯಾವುದೇ ಕಲೆಗಳಿಗೂ ಯೋಗದ ಅಡಿಪಾಯ ಅತ್ಯಂತ ಅಗತ್ಯವಾಗಿದೆ. ಯೋಗಾಭ್ಯಾಸದಿಂದ ದೈಹಿಕ ಕಾರ್ಯಕ್ಷಮತೆ ಮಾನಸಿಕ ಸ್ಥಿರತೆ ಮತ್ತು ಸಮತೋಲನ ಕಾಯ್ದುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಹೀಗಾಗಿ ಕಲಾವಿದರಿಗೆ ಮಾತ್ರವಲ್ಲ ಸಾಮಾನ್ಯರಿಗೂ ಯೋಗ ಅತ್ಯವಶ್ಯ. ಯೋಗವೇ ಸರ್ವ ಕಲೆಗಳಿಗೂ ಬುನಾದಿ ಎಂಬುದು ನನ್ನ ಅಭಿಮತ.

ಯೋಗಾಸನ, ಕಳರಿಪಯಟ್ಟು, ನೃತ್ಯ ಈ ಎಲ್ಲವೂ ಒಂದಕ್ಕೊಂದು ಪೂರಕವಾಗಿವೆ. ಆದರೆ ಪ್ರತಿಯೊಂದರ ಆಶಯವೂ ಬೇರೆ ಬೇರೆ, ಅದಕ್ಕೆ ತಕ್ಕಂತೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳುತ್ತಾರೆ ಹಾಗೂ ವಿಶಿಷ್ಟ ಭಂಗಿಗಳನ್ನು ಹೆಚ್ಚು ಅಳವಡಿಸಿಕೊಳ್ಳುತ್ತಾರೆ. ಆದರೆ ತಾಡಾಸನ, ವೃಕ್ಷಾಸನ, ಪರ್ವತಾಸನ, ಶವಾಸನ ಮುಂತಾದ ಕೆಲವು ಎಲ್ಲರಿಗೂ ಸಮಾನವಾಗಿ ಅವಶ್ಯವಾದವುಗಳು.

ಯೋಗಾಸನವು ಮನುಷ್ಯರ ಆರೋಗ್ಯದ ಕಡೆ ಹೆಚ್ಚಾಗಿ ಗಮನ ಹರಿಸಿರುವುದರಿಂದ ಅದಕ್ಕೆ ತಕ್ಕಂತೆ ಸಿಂಹಾಸನ, ಮಾಜಾಕಲಾಸನ, ಭುಜಂಗಾಸನ, ಶಶಾಂಕಾಸನ, ಶ್ವಾನಾಸನ, ಮಯೂರಾಸನ, ಕುಕ್ಕುಟಾಸನ, ಮಕರಾಸನ, ಮಂಡಲಾಸನಗಳನ್ನು ಅಳವಡಿಸಿದೆ.

ಕಳರಿಪಯಟ್ಟು ಶತ್ರುಗಳ ಆಕ್ರಮಣಕ್ಕೆ ಬೇಕಾದಂತೆ ಕಣ್ಣಿನ ದೃಷ್ಟಿ, ಭಂಗಿಗಳನ್ನು ಅಶ್ವಅಡಿವು, ಗಜಅಡಿವು, ಸರ್ಪಅಡಿವು, ಮಾರ್ಜಾರ ಅಡಿವು ಮುಂತಾದವುಗಳಲ್ಲಿ ಅಳವಡಿಸಿ ಅದನ್ನು ಆರಂಭದ ಹೆಜ್ಜೆಗಳಾಗಿ ಅಭ್ಯಾಸ ಮಾಡುತ್ತಾರೆ.

ಇನ್ನು ನೃತ್ಯ ಕಲೆಯ ವಿಷಯಕ್ಕೆ ಬರುವುದಾದರೆ ಇದರಲ್ಲಿ ಎಲ್ಲ ರೀತಿಯ ಅಭಿನಯವನ್ನು ಮಾಡುವುದರಿಂದ ಆಯಾ ಸಂದರ್ಭಕ್ಕೆ ತಕ್ಕಂತೆ ಯೋಗಾಸನ, ಕಳರಿಪಯಟ್ಟು ಎಲ್ಲವನ್ನೂ ಬಳಸಿಕೊಳ್ಳುವ ಅವಕಾಶವಿದೆ. ಎಲ್ಲದರಲ್ಲೂ ಹೊಸ ಪ್ರಯೋಗಗಳು ನಡೆಯುವ ಇಂದಿನ ದಿನಗಳಲ್ಲಿ ಕೆಲವು ನೃತ್ಯ ಕಲಾವಿದರು ತಮ್ಮ ನೃತ್ಯರೂಪಕಗಳಲ್ಲಿ ಯೋಗಾಸನ, ಕಳರಿಪಯಟ್ಟುವನ್ನು ಸೇರಿಸಿಕೊಂಡು ನೃತ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡುತ್ತ ವಿದೇಶಗಳಲ್ಲಿಯೂ ಮೆಚ್ಚಿಕೆ ಪಡೆದುಕೊಂಡಿದ್ದಾರೆ. ಬಹುತೇಕ ಕಲೆಗಳನ್ನು ಕರಗತ ಮಾಡಿಕೊಳ್ಳಲು ಯೋಗಾಭ್ಯಾಸವು ಬುನಾದಿಯಂತೆ ಸಹಕಾರಿಯಾಗುತ್ತದೆಂಬುದರಲ್ಲಿ ಸಂದೇಹವಿಲ್ಲ.

**ಯೋಗ ದಿನದ ಶುಭಾಶಯಗಳು, ಯೋಗ ಜೀವನದ ಅಂಗವಾಗಲಿ.** ●

ನಮ್ಮದು ಎಂಬ ಅಹಂಕಾರ ಸಲ್ಲದು.

# ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ SSSA ಪಾತ್ರದ ಬಗ್ಗೆ NEP–2020 ಹೇಳಿದ್ದೇನು?

**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**



ಆತ್ಮೀಯ ಓದುಗರೇ...

NEP–2020ಯ ಬಗ್ಗೆ ಸರಣಿ ಲೇಖನ ಬರೆಯಲು ಪ್ರಾರಂಭಿಸಿ 6 ಸಂಚಿಕೆಗಳಾದವು. ಕಳೆದ ಸಂಚಿಕೆಯಲ್ಲಿ ಹೇಳಿದಂತೆ ಪ್ರಾರಂಭದಲ್ಲಿದ್ದ ಆತಂಕ ಈಗ ದೂರವಾಗಿದೆ. Dropout ಬಗ್ಗೆ ಬರೆದ ಬರಹಕ್ಕೆ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆಗಳು ಬಂದಿವೆ. ಅದರಲ್ಲಿ ಅನೇಕರು ಲೇಖನದ ಓರೆ ಕೋರೆಗಳನ್ನು ತಿದ್ದಿ ಕಳಿಸಿರುವಿರಿ ಹಾಗೂ ಮೆಚ್ಚುಗೆಯನ್ನು ವ್ಯಕ್ತ ಪಡಿಸಿರುವಿರಿ. ಸಾಮಾಜಿಕ ಜಾಲತಾಣದಲ್ಲಿ ಈ ಲೇಖನದ ಬಗ್ಗೆ ವಿವರವಾದ ಚರ್ಚೆ ಮಾಡಿರುವಿರಿ. ಒಟ್ಟಾರೆ ಲೇಖನವನ್ನು ಅನೇಕರು ತಮ್ಮ ಇಷ್ಟದಂತೆ ಸ್ವೀಕರಿಸಿರುವಿರಿ. ಎಲ್ಲರ ಉದ್ದೇಶ ಲೇಖನವನ್ನು ಶ್ರೀಮಂತಗೊಳಿಸುವುದಾಗಿತ್ತು ಮತ್ತು ತಮ್ಮೆಲ್ಲರ ಚರ್ಚೆ, ಸಲಹೆ ಸೂಚನೆಗಳು ಲೇಖನಕ್ಕೆ ಪೂರಕವಾಗಿದ್ದವು. ಅದಕ್ಕಾಗಿ ತಮಗೆಲ್ಲರಿಗೂ ಅಭಿನಂದನೆಗಳು. ಈ ಸರಣಿ ಲೇಖನದ ಕೊನೆಯ ಲೇಖನ SSSA. ಇದನ್ನು ಓದಿದ ಮೇಲೆ ತಾವು ನಡೆಸುವ ಚರ್ಚೆ, ಅದರಿಂದ ಹೊರಬರುವ ಅಭಿಪ್ರಾಯಗಳು ಈ ಲೇಖನದ ಹೊಳಪಿಗೆ ಪೂರಕವಾಗಿರುತ್ತವೆ ಎಂದು ಭಾವಿಸಿಕೊಳ್ಳುವೆ.

ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಮಾನ್ಯತೆ (Standard- setting and Accreditation for School Education) ಎನ್ನುವುದು NEP–2020ಯಲ್ಲಿ ಬಹು ಚರ್ಚಿತ ವಿಷಯ.

## ಮಾನಕಗಳು ಹೇಗಿರಬೇಕು ಎಂದರೆ

- ಶಾಲೆಗಳನ್ನು ಅತಿಯಾಗಿ ನಿರ್ಬಂಧಿಸಬಾರದು.
- ನಾವೀನ್ಯತೆಗೆ ಅವಕಾಶವಿರಬೇಕು. ಅಂದರೆ ಪ್ರಾಂಶುಪಾಲರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ನಿರುತ್ಸಾಹ ಗೊಳಿಸಬಾರದು.
- ಶಾಲೆಯ ಮತ್ತು ಶಿಕ್ಷಕರಲ್ಲಿ ಆತ್ಮವಿಶ್ವಾಸವನ್ನು ತುಂಬುವಂತೆ ಇರಬೇಕು.
- ಈ ವ್ಯವಸ್ಥೆ ಸಾರ್ವಜನಿಕ ಮುಕ್ತವಾಗಿರಬೇಕು ಮತ್ತು ಪಾರದರ್ಶಕವಾಗಿರಬೇಕು.

## ಈಗಿರುವ ವ್ಯವಸ್ಥೆ ಹೇಗಿದೆ?

- ಶಿಕ್ಷಣ ಒದಗಿಸುವುದು, ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಮತ್ತು ನೀತಿ ನಿರೂಪಣೆಗಳು ಶಾಲಾ ಶಿಕ್ಷಣ ಇಲಾಖೆ ನಿರ್ವಹಿಸುತ್ತದೆ. ಇದು ಹಿತಾಸಕ್ತಿ ಸಂಘರ್ಷ ಮತ್ತು ಅಧಿಕಾರದ ಅತಿಯಾದ ಕೇಂದ್ರಿಕರಣಕ್ಕೆ ಕಾರಣವಾಗಿದೆ.
- ನಿಯಂತ್ರಣದ ಮೇಲೆ ಹೆಚ್ಚಿನ ಗಮನ ಇರುವುದರಿಂದಾಗಿ ಗುಣಮಟ್ಟದ ಶಿಕ್ಷಣ ಒದಗಿಸುವುದರಲ್ಲಿ ದುರ್ಬಲವಾಗಿದೆ. ಇದು ಅನೇಕ ನಿಷ್ಫಲಿತಾಂಶಕಾರಿ ಕಾರ್ಯ ನಿರ್ವಹಣೆಗೆ ಸಹಾಯಕವಾಗಿದೆ.
- ಸಾರ್ವಜನಿಕ ಸೇವಾ ಮನೋಭಾವ ಖಾಸಗಿ ಶಾಲೆಗಳನ್ನು ನಿರುತ್ಸಾಹಗೊಳಿಸಿದೆ.
- ಖಾಸಗಿ ಮತ್ತು ಸಾರ್ವಜನಿಕ ಶಾಲೆಗಳೆರಡರ ನಿಯಂತ್ರಣದಲ್ಲಿ ಸಾಕಷ್ಟು ಅಸಮಾನತೆ ಇದೆ.

ಭಾರತದಂತಹ ಪ್ರಜಾಪ್ರಭುತ್ವವನ್ನು ನಂಬಿರುವ ದೇಶದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಬಹು ಪ್ರಮುಖವಾದದ್ದು. ಶಾಲಾ ಶಿಕ್ಷಣದಲ್ಲಿ ಮಹತ್ವದ ಮತ್ತು ಪ್ರಯೋಜನಕಾರಿ ಪಾತ್ರವನ್ನು ವಹಿಸಲು ಖಾಸಗಿ ಮತ್ತು ಸಾರ್ವಜನಿಕ ಸೇವಾ ಮನೋಭಾವದ ಶಾಲಾ ವಲಯವನ್ನು ಪ್ರೋತ್ಸಾಹಿಸಬೇಕು ಮತ್ತು ಸಶಕ್ತಗೊಳಿಸಬೇಕು. ಅದಕ್ಕಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ

## NEP–2020ಯಲ್ಲಿಯ ಶಿಫಾರಸ್ಸುಗಳು

- ಶಾಲಾ ಶಿಕ್ಷಣ ಇಲಾಖೆಯು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಗೆ ಒಟ್ಟಾರೆ ಮೇಲ್ವಿಚಾರಣೆ ಮತ್ತು ನೀತಿ ನಿರೂಪಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ.
- ರಾಜ್ಯದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಶೈಕ್ಷಣಿಕ ಕಾರ್ಯಾಚರಣೆಗಳು ಮತ್ತು ಸೇವಾ ನಿರ್ಬಂಧನೆಗಳನ್ನು ಶಾಲಾ ಶಿಕ್ಷಣ ನಿರ್ದೇಶನಾಲಯವು ನಿರ್ವಹಿಸುತ್ತದೆ.
- State School Standards Authority (SSSA) ಸ್ಥಾಪಿಸುವುದು ಮತ್ತು ಅದು ಈ ಕೆಳಗಿನ ಕಾರ್ಯಗಳನ್ನು ಮಾಡುವುದು.

  ಎ) ರಾಜ್ಯ ಶಾಲಾ ಮಾನಕ ಪ್ರಾಧಿಕಾರವು (SSSA) ಸಾರ್ವಜನಿಕ ಖಾಸಗಿ ಮತ್ತು ಸಾರ್ವಜನಿಕ ಸೇವಾ ಮನೋಭಾವದ ವ್ಯಕ್ತಿ/ ಸಂಸ್ಥೆಗಳು ಪ್ರಾರಂಭಿಸಿದ ಶಾಲೆಗಳು ಪ್ರಕಾರಗಳು ಮತ್ತು ಶಾಲಾ ಪೂರ್ವ ಶಿಕ್ಷಣ ಸೇರಿದಂತೆ ಶಿಕ್ಷಣದ ಎಲ್ಲ ಹಂತಗಳಲ್ಲಿ ಅವಶ್ಯಕವಾದ ಗುಣಮಟ್ಟ ಮಾನಕಗಳನ್ನು ಅನುಕರಣೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

  ಬಿ) ಸ್ವ–ನಿಯಂತ್ರಣ ಗುಣಮಟ್ಟ ಅಥವಾ ಅಂಗೀಕರಣ ವ್ಯವಸ್ಥೆಯನ್ನು ಸ್ಥಾಪಿಸುವುದು.

  ಸಿ) ಎಲ್ಲಾ ಪ್ರಕಾರದ ಶಾಲೆಗಳು ನಿರ್ದಿಷ್ಟವಾದ ಕನಿಷ್ಠ ವೃತ್ತಿಪರ ಮತ್ತು ಗುಣಮಟ್ಟದ ಮಾನಕಗಳನ್ನು ಖಚಿತಪಡಿಸುವುದು.

  ಡಿ) ಇದು ಮೂಲಭೂತ ನಿಯತಾಂಶಗಳನ್ನು ಆಧರಿಸಿ ಕನಿಷ್ಠ (ಸುರಕ್ಷತೆ, ಭದ್ರತೆ, ಮೂಲಭೂತ ಸೌಕರ್ಯ, ವಿಷಯವಾರು ಮತ್ತು ತರಗತಿವಾರು ಶಿಕ್ಷಕರು, ಆರ್ಥಿಕ ಸಂಭವನೀಯತೆ ಮತ್ತು ಆಡಳಿತದ ಉತ್ತಮ ಪ್ರಕ್ರಿಯೆಗಳನ್ನು ರೂಪಿಸುವುದು ಮತ್ತು ಅನುಸರಿಸುವಂತೆ ಮಾಡುವುದು.

ಪುಟ 9 ಕ್ಕೆ ➤

# ಗುರುವಂದನೆ
## ಏಕೆ ? ಹೇಗೆ?



■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

'ಗುರು' ಶಬ್ದವು ಉಪದೇಶಕ, ಪಾಠ ಹೇಳುವವ, ಪೂಜ್ಯ, ತಂದೆ – ಈ ಎಲ್ಲಾ ಅರ್ಥವಿಶೇಷಗಳನ್ನು ಹೊಂದಿದೆ. ಗುರು ವಿದ್ಯಾರ್ಥಿಗಳಿಗೆ ಪಾಠ ಹೇಳುವ ಜವಾಬ್ದಾರಿಯನ್ನು ಮೊದಲಿಗೆ ನಿರ್ವಹಿಸುತ್ತಾನೆ. ಶಿಕ್ಷಣ ಇಲಾಖೆ ನಿಗದಿಪಡಿಸಿದ ವಿಷಯಗಳನ್ನು ಬೋಧಿಸುವುದು ಅವನ ಕೆಲಸ. ಅಲ್ಲಿಗೆ ಮುಗಿಯಿತೇ ಅವನ ಕೆಲಸ?

ಪರೀಕ್ಷೆಗೆ ಇಲಾಖೆ ಗೊತ್ತುಪಡಿಸಿದ ಪಾಠಗಳನ್ನು ಬೋಧಿಸುವುದಷ್ಟೇ ಅಲ್ಲದೆ ಅದಕ್ಕಿಂತ ಮಿಗಿಲಾಗಿ ತನ್ನ ಶಿಷ್ಯರ ವ್ಯಕ್ತಿತ್ವವನ್ನು ರೂಪಿಸುವ, ಪ್ರತಿಯೊಬ್ಬ ಶಿಷ್ಯನನ್ನೂ 'ಸತ್ಪ್ರಜೆ'ಯನ್ನಾಗಿಸುವ ಗುರುತರವಾದ ಜವಾಬ್ದಾರಿಯನ್ನು ಗುರು ನಿರ್ವಹಿಸಬೇಕಾಗುತ್ತದೆ. ತನ್ನ ಶಿಷ್ಯನ ಏಳಿಗೆಗೆ ಪೂರಕವಾದ, ಸಮಾಜದ ಹಿತಕ್ಕೆ ಪೋಷಕವಾದ ವಿಷಯಗಳನ್ನು, ವಿಚಾರಗಳನ್ನು ಉಪದೇಶಿಸಬೇಕಾಗುತ್ತದೆ.

ವೇದಗಳು, ಉಪನಿಷತ್ತುಗಳು, ಪುರಾಣ, ಮಹಾಕಾವ್ಯಗಳು, ಉತ್ತಮರ ಜೀವನದ ಆದರ್ಶಗಳಲ್ಲಿರುವ ಉನ್ನತ ವಿಚಾರಗಳನ್ನು ತನ್ನದೇ ಆದ ಶೈಲಿಯಲ್ಲಿ ಶಿಷ್ಯನ ಮನಮುಟ್ಟುವಂತೆ ತಿಳಿಸಬೇಕಾಗುತ್ತದೆ. ಆ ಮೂಲಕ ಸಮಾಜಕ್ಕೆ ಒಬ್ಬ ಶ್ರೇಷ್ಠ, ಗುಣವಂತನನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಾನೆ. ಹಾಗಾಗಿ ಗುರುವು ಪೂಜ್ಯನೂ ಹೌದು. ತಂದೆ ಮಗುವನ್ನು ಸಾಕಿ, ಸಲಹಿ, ಪೋಷಿಸಿ ಬೆಳೆಸುತ್ತಾನೆ.

ಗುರುವು ಆ ಮಗುವಿಗೆ ಉತ್ತಮ ಶಿಕ್ಷಣ, ಸಂಸ್ಕಾರವನ್ನು ನೀಡುವುದರ ಮೂಲಕ ತಂದೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆ. ಹಾಗಾಗಿ ಗುರು ತಂದೆಯೂ ಹೌದು. ಶಿಷ್ಯನಿಗೆ ಉತ್ತಮ ಸಂಸ್ಕಾರವನ್ನು ನೀಡುವುದರ ಮೂಲಕ ಉತ್ತಮ ಸಮಾಜವನ್ನು ರೂಪಿಸುವ ಗುರುವಿಗೆ ಸಮಾಜವೂ 'ಗುರುಸಾಕ್ಷಾತ್ ಪರಂಬ್ರಹ್ಮ' ನೆಂದು ಉನ್ನತ ಸ್ಥಾನವನ್ನು ಕೊಟ್ಟು ಗೌರವಿಸಿದೆ. ತನ್ನ ಜೀವನವನ್ನು ಎಲ್ಲಾ ರೀತಿಯಲ್ಲೂ ಉತ್ತಮವಾಗಿ ರೂಪಿಸಿದ ಗುರುವನ್ನು ಸದಾಕಾಲ ಸ್ಮರಿಸುತ್ತಿರಬೇಕು. ನಿಜವಾದ ಅರ್ಥದಲ್ಲಿ ಅದೇ ಗುರುವಿಗೆ ನೀಡುವ ಬಹುದೊಡ್ಡ ಕಾಣಿಕೆ.

ನಮ್ಮಲ್ಲಿ ಶ್ರೇಷ್ಠ ಗುರುಪರಂಪರೆಯೇ ಇದೆ. ವೇದವ್ಯಾಸರಿಂದ ಪ್ರಾರಂಭವಾದ ಈ ಪರಂಪರೆ ಇಂದಿಗೂ, ಎಂದೆಂದಿಗೂ ಮುಂದುವರೆಯುತ್ತಿದೆ. ಗುರು ವೇದವ್ಯಾಸರನ್ನು ಪ್ರತಿವರ್ಷ ಆಷಾಢ ಮಾಸದ ಶುದ್ಧ ಪೂರ್ಣಿಮೆಯಂದು ಸ್ಮರಿಸುವ ಪರಂಪರೆ ಹಿಂದಿನಿಂದಲೂ ಅನೂಚಾನವಾಗಿ ನಡೆದು ಬಂದಿದೆ.

ಅಂತೆಯೇ ಅತ್ಯುತ್ತಮ ಶಿಕ್ಷಕರಾದ, ನಮ್ಮ ದೇಶದ ರಾಷ್ಟ್ರಪತಿಗಳಾದ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟುಹಬ್ಬವನ್ನು 'ಶಿಕ್ಷಕರ ದಿನವಾಗಿ' ಪ್ರತಿವರ್ಷ ಸೆಪ್ಟೆಂಬರ್ 5ರಂದು ಆಚರಿಸಲಾಗುತ್ತಿದೆ. ಹಾಗಾದರೆ ನಾವು ಯಾವ ದಿನ ಗುರುವಂದನೆ ಆಚರಿಸಬೇಕು? ನಿಜವಾಗಿ ನೋಡಿದರೆ ಪ್ರತಿದಿನವೂ ನಮ್ಮ ಗುರುಗಳನ್ನು ನೆನೆಯಬೇಕಲ್ಲವೇ? ಆದ್ದರಿಂದ ಈ ಎರಡೂ ದಿನ ಶಿಕ್ಷಕ ದಿನಾಚರಣೆಯನ್ನು ಆಚರಿಸುವುದು ಸಮಂಜಸ.

ಸ್ವಾಮಿ ವಿವೇಕಾನಂದರು ವಿಶ್ವವಿಜೇತ, ವಿಶ್ವಮಾನವ. ಅಂತೆಯೇ ಅವರು ವಿಶ್ವಗುರುವೂ ಹೌದು. ದೇಶ ವಿದೇಶಗಳಲ್ಲಿ ವಿವೇಕಾನಂದರ ವಿಚಾರಗಳು ಜನಮನದಲ್ಲಿ ಅಚ್ಚಳಿಯದೆ ಉಳಿದಿದೆ. ಜನರ ಮೇಲೆ ಅವರ ಪ್ರಭಾವ ಅಗಾಧ. ಹಾಗೆಯೇ ರಾಷ್ಟ್ರಪ್ರೇಮ, ಚಿಂತನೆ, ಕಾರ್ಯಗಳಿಂದ ಎಲ್ಲ ಜನರ ಮನಸ್ಸನ್ನು ಗೆದ್ದವರು ಸುಭಾಷ್ ಚಂದ್ರ ಬೋಸರು. ಈ ಇಬ್ಬರು ಮಹನೀಯರನ್ನು ಸ್ಮರಿಸುವುದು ಸೂಕ್ತವೆಂದು ಭಾವಿಸಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ABRSM)ವು ಕಳೆದ ಕೆಲವು ವರ್ಷಗಳಿಂದ ಸ್ವಾಮಿ ವಿವೇಕಾನಂದರ ಜನ್ಮದಿನ ಜನವರಿ 12 ರಿಂದ ಸುಭಾಷ್ ಚಂದ್ರಬೋಸರ ಜನ್ಮದಿನ ಜನವರಿ 23ರ ನಡುವೆ ದೇಶದ ಎಲ್ಲೆಡೆ 'ಸಂಕಲ್ಪ ದಿನ' ವನ್ನು ದೇಶದ ಎಲ್ಲೆಡೆ ಆಚರಿಸುತ್ತಿದೆ. ನಾವೂ ನಮ್ಮ ಶಾಲೆಗಳಲ್ಲಿ 'ಸಂಕಲ್ಪ ದಿನ'ವನ್ನು ಹೆಮ್ಮೆಯಿಂದ ಆಚರಿಸಬಹುದಲ್ಲವೇ?

ಈ ಎಲ್ಲಾ ದಿನಾಚರಣೆಗಳನ್ನು ಆಚರಿಸುವುದು ಹೇಗೆ? ಈ ವರ್ಷ ಜುಲೈ 13 ಬುಧವಾರದಂದು ಗುರು ಪೂರ್ಣಿಮೆ. ಅಂದು ಶಾಲೆಯಲ್ಲಿ ಸಭಾ ಕಾರ್ಯಕ್ರಮವನ್ನು ಏರ್ಪಡಿಸಿ ಸಮಾರಂಭಕ್ಕೆ ಸೂಕ್ತವಾದ ಅತಿಥಿಗಳನ್ನು ಆಹ್ವಾನಿಸಿ ವೇದವ್ಯಾಸರು ಹಾಗೂ ಅಂತಹ ಹಲವಾರು ಮಹನೀಯರ ಸಾಧನೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸಬಹುದು.

ಸೆಪ್ಟೆಂಬರ್ 5 ರಂದು ಶಾಲೆಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಹಾಗೆಯೇ ಸಂಕಲ್ಪ ದಿನವನ್ನೂ ಸರಳವಾಗಿ ರೂಪಿಸುವುದರ ಮೂಲಕ ವಿಶ್ವಗುರು ವಿವೇಕಾನಂದರಿಗೆ, ಸುಭಾಷ್ ಚಂದ್ರ ಬೋಸರಿಗೆ ನಮ್ಮ ನಮನಗಳನ್ನು ಸಲ್ಲಿಸಬಹುದು.

ಈ ಎಲ್ಲಾ ಗುರುವಂದನಾ ದಿನಗಳಂದು ಈ ಮಹನೀಯರನ್ನು ಸ್ಮರಿಸುವುದರ ಜೊತೆಗೆ ನಮ್ಮನ್ನು ರೂಪಿಸಿದ ಗುರುಗಳನ್ನು ಸ್ಮರಿಸುವುದು ತುಂಬ ಅಗತ್ಯ. ಹಾಗೆ ನೋಡಿದರೆ ಪ್ರತಿನಿತ್ಯವೂ ಗುರುಗಳನ್ನು ಸ್ಮರಿಸುವುದು ಉತ್ತಮ ಅಭ್ಯಾಸ. ಶಿಕ್ಷಕರಾದ ನಾವು ಈ ಅಭ್ಯಾಸವನ್ನು ಪ್ರಾರಂಭಿಸಿ ನಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಬಹುದಲ್ಲವೇ? ●

# ಪರಿಸರ ಮಾಲಿನ್ಯವೆಂದರೇನು?



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ತಾಯಿ ಮಕ್ಕಳ ಅನುಬಂಧಕ್ಕೆ ಎಂತಹ ಆತ್ಮೀಯತೆ ಇದೆಯೋ ಅದೇ ರೀತಿಯ ಸಂಬಂಧ ಪರಿಸರದೊಂದಿಗೆ ಮಾನವನಿಗೆ ಹೆಣೆದುಕೊಂಡಿದೆ. 'ಪ್ರಕೃತಿಮಾತೆ' ಎನ್ನುತ್ತೇವೆ, 'ಭೂಮಿತಾಯಿ' ಎನ್ನುತ್ತೇವೆ. ಅಂತೆಯೇ ಜನ್ಮಕೊಟ್ಟ ತಾಯಿಯ ಸೇವೆಮಾಡುವಲ್ಲಿ ನಾವೆಷ್ಟು ಕರ್ತವ್ಯನಿಷ್ಠರಾಗಿರಬೇಕೋ ಅಂತಹುದೇ ಬದ್ಧತೆ, ಕಾಳಜಿ ಪ್ರಕೃತಿಯ ಬಗ್ಗೆ, ಪರಿಸರದ ಬಗ್ಗೆ ಕೂಡ ನಮ್ಮಲ್ಲಿರಬೇಕು. ರಾಷ್ಟ್ರಕವಿ ಕುವೆಂಪು 'ಪ್ರಕೃತಿಯ ಆರಾಧನೆ ಪರಮನ ಆರಾಧನೆ' ಎಂದು ಭಗವಂತನ ಸಾಕ್ಷಾತ್ಕಾರವನ್ನೇ ಅಲ್ಲಿ ಕಾಣುತ್ತಾರೆ. ಇಂತಹ ಉದಾತ್ತ ಚಿಂತನೆಯನ್ನು ಹೊಂದಿರುವ ಸಂಸ್ಕೃತಿ ನಮ್ಮದು.

ಈ ಎಲ್ಲ ಅಂಶಗಳು ನಮ್ಮ ಸುತ್ತಲಿನ ವಾತಾವರಣಕ್ಕೆ ಸಂಬಂಧಿಸಿದ್ದಾಗುತ್ತದೆ ನಿಜ. ಅಂದರೆ, ಈ ಎಲ್ಲವೂ ಬಾಹ್ಯ ಪರಿಸರವನ್ನು ಕುರಿತದ್ದೇ ಆಗಿದೆ. ಆದರೆ ಆಂತರಿಕ ಪರಿಸರವೆಂಬ ಮತ್ತೊಂದು ಅಂಶವೂ ಇರುತ್ತದೆಂಬುದನ್ನು ಮರೆಯಬಾರದು. ಅದೇ ಅಂತರಂಗ. ಇಲ್ಲಿನ ಮಾಲಿನ್ಯವನ್ನು ತಡೆಗಟ್ಟುವುದೂ ಅಗತ್ಯವೇ ಆಗಿದೆ. ಇದನ್ನೇ ತಾನೆ ಬಸವಣ್ಣನವರು ಹೇಳಿರುವುದು. ಅಂತರಂಗ ಶುದ್ಧಿಯೂ ಬಹಿರಂಗಶುದ್ಧಿಯಷ್ಟೇ ಮುಖ್ಯವಾದುದೆಂದು. ಒಂದು, ಬೇರೆಯವರ ಸಹಕಾರದೊಂದಿಗೆ ನಮ್ಮ ಪ್ರಯತ್ನವನ್ನೂ ಸೇರಿಸಿ ಮಾಡುವಂತಹುದು. ಮತ್ತೊಂದಕ್ಕೆ ನಮ್ಮದೇ ಪ್ರಯತ್ನ ಪ್ರಧಾನವಾಗಿರುತ್ತದೆ. ವ್ಯಕ್ತಿತ್ವದ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಇದು ಬಹುಮುಖ್ಯ. ಆತ್ಮವಿಶ್ಲೇಷಣೆ ಮಾಡುತ್ತ, ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾ ಆತ್ಮವಿಕಾಸಕ್ಕೆ ಪ್ರಯತ್ನಿಸುವುದು ಅತಿಮುಖ್ಯ.

ಹಲವು ದಶಕಗಳಿಂದಲೂ ಪರಿಸರ ಮಾಲಿನ್ಯ, ಪರಿಸರ ನೈರ್ಮಲ್ಯ, ಪರಿಸರ ಸಂರಕ್ಷಣೆಯ ಮಹತ್ತ್ವ ಇತ್ಯಾದಿ ವಿಷಯಗಳನ್ನು ಕುರಿತು ಕೇಳುತ್ತಲೇ ಇದ್ದೇವೆ. ಕಾರಣ, ಬದಲಾಗುತ್ತಿರುವ ಜೀವನಶೈಲಿಗೆ ನಾಗರಿಕತೆಯ ಬದಲಾವಣೆಗಳ ಕಾರಣದಿಂದ ಇವು ಎಲ್ಲರ ಗಮನವನ್ನು ಸೆಳೆಯುತ್ತಿವೆ. ಆದರೆ ಇಲ್ಲಿ ಎಲ್ಲವೂ ಬಾಹ್ಯ ಪರಿಸರಕ್ಕೆ ಅಂದರೆ, ಹರಿಯುವ ನೀರಿನಲ್ಲಿ, ಬೀಸುವ ಗಾಳಿಯಲ್ಲಿ, ವಾಸಿಸುವ ಪರಿಸರದಲ್ಲಿ ಮಾಲಿನ್ಯ ತಡೆಗಟ್ಟುವ ಕ್ರಮಗಳನ್ನು ಮಾತ್ರ ಯೋಚಿಸುತ್ತೇವೆ. ಆದರೆ, ಅಂತರಂಗದಲ್ಲಿರುವ ಮಾಲಿನ್ಯವನ್ನು ನಮ್ಮ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿರುವ ಮಾಲಿನ್ಯವನ್ನು, ಕಲುಷಿತ ವಾತಾವರಣವನ್ನು ಸ್ವಚ್ಛಪಡಿಸಬೇಕೆಂಬುದರ ಬಗ್ಗೆ ಕೂಡ ಚಿಂತನೆ ಮಾಡುವುದು ಅಗತ್ಯವಾಗಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಆಗಿರುವ ಅದೆಷ್ಟೋ ಬದಲಾವಣೆಗಳು (ಅನಾರೋಗ್ಯಕರವಾದ), ಭಾರತೀಯ ಸಂಸ್ಕೃತಿಯ ಮೂಲ ಚಿಂತನೆ, ಆದರ್ಶಗಳನ್ನು ಏರುಪೇರು ಮಾಡಿವೆ. ಅಲ್ಲಿ ಸಕಾರಾತ್ಮಕವೂ, ನಕಾರಾತ್ಮಕವೂ ಆದ ಅಂಶಗಳನ್ನು ಕಾಣಬಹುದಾಗಿದೆ. ಅಂದರೆ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಮೊದಲಿನ ಪಾವಿತ್ರ್ಯವಾಗಲೀ, ವೈಚಾರಿಕ ಪರಿಶುದ್ಧಿಯಾಗಲೀ ಇಲ್ಲದೆ, ಬದ್ಧತೆ, ಅರ್ಪಣಾ ಮನೋಭಾವ, ಪ್ರಾಮಾಣಿಕತೆ, ಸೇವಾ ನಿಷ್ಠೆ, ದೇಶಪ್ರೇಮ ಎಂಬ ಲಕ್ಷಣಗಳ ಅನುಪಸ್ಥಿತಿಯನ್ನೇ ಕಾಣುತ್ತಿದ್ದೇವೆ. ಇವೆಲ್ಲ ಮೇಲೆ ಪ್ರಸ್ತಾಪಿಸಿರುವ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿವೆ. ಸ್ವಾರ್ಥ ತುಂಬಿದ ನಡವಳಿಕೆಗಳು, ವಿಲಾಸೀ ಜೀವನದ ಆಕರ್ಷಣೆಗೆ ಒಳಗಾಗುವುದು, ಸಂಸ್ಕಾರವೆಂಬುದರ ಕೊರತೆ ಎಲ್ಲವೂ ಆಧುನಿಕ ಮನೋಭಾವವೆಂಬ ಭ್ರಮೆಯ ಅಡಿಯಲ್ಲಿ ತುಂಬಿಕೊಂಡಿವೆ. ಮಾತೃಭೂಮಿಯೆಂದರೆ ಅನುಬಂಧವನ್ನು ಬೆಳೆಸಿಕೊಳ್ಳುವ ಬದಲು ವಿದೇಶೀ ಜೀವನದತ್ತ ಆಕರ್ಷಿತರಾಗುವುದು ಹೆಚ್ಚಿದೆ. ನೆಲದ ಸಂಸ್ಕೃತಿಯ ಹಿರಿಮೆಯ ಬಗ್ಗೆ ತಿಳಿಯುವ ಕುತೂಹಲ, ಪ್ರೀತಿಗಿಂತ ಉದಾಸೀನದ ತಿರಸ್ಕಾರದ ಧೋರಣೆಗಳೇ ಹೆಚ್ಚಾಗತೊಡಗಿದೆ. ಇವೆಲ್ಲ ಬದುಕಿನ, ಜೀವನದ ಸುತ್ತಲೂ ಕಂಡುಬರುತ್ತಿರುವ ಮಾಲಿನ್ಯವೇ ಅಲ್ಲವೇ? ಈ ಬಗೆಯ ಪರಿಸರ ಮಾಲಿನ್ಯವನ್ನು ಶುದ್ಧೀಕರಿಸುವುದೂ ಕೂಡ ನಮ್ಮ ಕರ್ತವ್ಯವೇ ಆಗಿರುತ್ತದಲ್ಲವೆ? ಸಾಂಸ್ಕೃತಿಕ ಪರಿಸರದಲ್ಲಿ ಹೆಚ್ಚುತ್ತಿರುವ ವೈಷಮ್ಯಗಳು, ಮತ್ತೊಬ್ಬರ ಅಭಿವೃದ್ಧಿಯನ್ನು ಕುರಿತ ಅಸಹನೆ, ಸಂಕುಚಿತ ಮನೋಭಾವ ಎಲ್ಲವೂ ಸಂಸ್ಕೃತಿಯ ಪ್ರಸಾರವನ್ನು ಮಾಡುವ ಬದಲು ವಿರುದ್ಧ ಪರಿಣಾಮವನ್ನೇ ಉಂಟುಮಾಡುತ್ತದೆಯಲ್ಲವೇ? ಭಾರತೀಯ ಸಂಸ್ಕೃತಿ ಎಂಬ ಸನಾತನವೂ, ಮೌಲಿಕವೂ ಆದ ಒಂದು ಉದಾತ್ತ ಸಂಸ್ಕೃತಿಯ ಮೂಲ ಸತ್ವಕ್ಕೆ ಧಕ್ಕೆಯನ್ನುಂಟುಮಾಡುತ್ತದಲ್ಲವೇ? ಇಂತಹ ಮಾಲಿನ್ಯವನ್ನು ಹೋಗಲಾಡಿಸಿ, ಸಮಾಜದ ಆರೋಗ್ಯವನ್ನು ಕಾಪಾಡುವುದು ಎಲ್ಲ ನಾಗರಿಕರ ಹೊಣೆಯಾಗಿದೆ.

ಇದೇ ರೀತಿಯಲ್ಲಿ ಗಮನಿಸುವುದಾದರೆ ದೇಶದ, ರಾಜಕೀಯ ಪರಿಸರದ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಅಷ್ಟೇ ಏಕೆ ಪ್ರಪಂಚದಾದ್ಯಂತ ಎಲ್ಲಕಡೆ ಮಾನವನ ಅಧಿಕಾರ, ಬಲಿಷ್ಠನಾಗುವ ಆಕಾಂಕ್ಷೆ, ಮಿತಿ ಮೀರಿ ಬೆಳೆಯುತ್ತ ಸ್ವದೇಶದ ಬಗ್ಗೆ ಚಿಂತನೆ ಮಾಡುವುದು ಹಿಂದೆ ಸರಿಯುತ್ತಿದೆ. ದೇಶಹಿತಕ್ಕಿಂತ ವೈಯಕ್ತಿಕ ಹಿತಕ್ಕೆ ಆದ್ಯತೆ ನೀಡುವುದಾಗುತ್ತಿದೆ. 'ರಾಷ್ಟ್ರದೇವೋಭವ' ಎಂಬುದಕ್ಕೆ ಅರ್ಥವಿಲ್ಲದಂತಾಗಿದೆ. ರಾಜಕೀಯ ಕ್ಷೇತ್ರದಲ್ಲಿನ ಈ ಮಾಲಿನ್ಯ ಶುದ್ಧಿಯಾಗಬೇಕು.

ಇನ್ನು ಧಾರ್ಮಿಕ ಕ್ಷೇತ್ರವೂ ಈ ಅಪವಾದಕ್ಕೆ ಹೊರತಾಗಿಲ್ಲ. ಸಮಾಜಕ್ಕೆ ದಾರಿತೋರಿಸಬೇಕಾದ ಕ್ಷೇತ್ರದಲ್ಲಿಯೇ ಅಸಹನೆ, ಅಸಹಕಾರ, ಅಧಿಕಾರ ಲಾಲಸೆ ಮುಂತಾದ ದೌರ್ಬಲ್ಯಗಳು ತಲೆದೋರುತ್ತ ಅವುಗಳಲ್ಲಿ ಕೂಡ ಅನೇಕ ಕಡೆಗಳಲ್ಲಿ ಬಿರುಕುಗಳನ್ನು ಕಾಣುವಂತಾಗಿದೆ. ಹೃದಯವೈಶಾಲ್ಯದ ಪವಿತ್ರ ಬೋಧನೆಯು ಬದಲಾಗಿ ಗುಂಪುಗಾರಿಕೆಯನ್ನು ಉತ್ತೇಜಿಸುವ ಸಮಾಜವನ್ನು ಒಡೆಯುವ ತಂತ್ರಗಾರಿಕೆಯಿಂದ ಸ್ವಾರ್ಥಲಾಭದ ರಾಜಕೀಯದ ಚದುರಂಗದಾಟ ವಾಡುವ ಚಟುವಟಿಕೆಗಳು ಪರಿಸರ ಮಾಲಿನ್ಯ ಉಂಟುಮಾಡುತ್ತಿರುವುದು ವಿಷಾದದ ಸಂಗತಿ.

ಭಾರತೀಯ ಸಂಸ್ಕೃತಿಯ ಬೆನ್ನೆಲುಬು ಎಂದೇ ಕರೆಯುವ ಕುಟುಂಬ ವ್ಯವಸ್ಥೆಯಲ್ಲಿಯೂ ಇಂತಹ ಮಾಲಿನ್ಯವನ್ನು ಕಾಣುತ್ತಿದ್ದೇವೆ. ಮಾನವೀಯ ಸಂಬಂಧಗಳು ಅರ್ಥವನ್ನು ಕಳೆದುಕೊಳ್ಳುತ್ತಿವೆ. ಈ ಎಲ್ಲ ಬಗೆಯ ಪರಿಸರಗಳಲ್ಲಿ ಶುಚಿತ್ವವನ್ನು ಕೈಗೊಳ್ಳುವ ಕಾರ್ಯವು ಯಶಸ್ವಿಯಾಗಿ ನಡೆದರೆ 'ಪರಿಸರ ನೈರ್ಮಲ್ಯ' ಅರ್ಥಪೂರ್ಣವಾಗಿರುತ್ತದೆ. ●

**ಕೋಪ ಎಂಬ ಅಪಾಯಕಾರಿ ಬೆಂಕಿಯು ನಮ್ಮ ವಿನಾಶಕ್ಕಾಗಿಯೇ ಇರುವ ಮೊದಲ ಶತ್ರು.**

# ಪ್ಲಾಸ್ಟಿಕ್ ಉಪಯೋಗ ಮತ್ತು ನಿರ್ವಹಣೆ



**ಶ್ರೀಮತಿ ಗಾಯತ್ರಿ**
**ಪ್ರಾಂಶುಪಾಲರು,**
**ಸರಕಾರಿ ಕಾಲೇಜು**
**ಕೋಡಿಹಳ್ಳಿ**

ಈಗ ನಾವಿರುವುದು ಪ್ಲಾಸ್ಟಿಕ್ ಯುಗದಲ್ಲಿ. ಸುವರ್ಣಯುಗ, ರಜತಯುಗಗಳಲ್ಲಿ ಚಿನ್ನ ಬೆಳ್ಳಿ ಉಪಯೋಗಿಸುತ್ತಿದ್ದಂತೆ ಈಗ ಅತಿ ಹೆಚ್ಚು ಪ್ಲಾಸ್ಟಿಕ್ ಬಳಸುತ್ತಿದ್ದೇವೆ. ಇದಕ್ಕೆ ಕಾರಣ ಅದರ ಗುಣಲಕ್ಷಣಗಳು. ಪ್ಲಾಸ್ಟಿಕ್ ಪಾಲಿಮರ್‌ಗಳಿಂದ ತಯಾರಾದ ಕೃತಕ ವಸ್ತು. ಇದನ್ನು ಮೃದುವಾಗಿಸಿ ಬೇಕಾದ ಆಕಾರಕ್ಕೆ ತರಬಹುದು. ಎರಕ ಹೊಯ್ದು ಅನೇಕಾನೇಕ ವಸ್ತುಗಳನ್ನು ತಯಾರಿಸಿ ಬಳಸಬಹುದು.

ಬಟ್ಟೆಯ ಎಳೆಗಳಾಗಿ ಮಾಡಿ ನೇಯ್ದು ಜವಳಿ ಉದ್ಯಮದಲ್ಲಿ, ವಿದ್ಯುತ್ ಅವಾಹಕವಾಗಿರುವುದರಿಂದ ವಿದ್ಯುತ್ ತಂತಿಗಳಿಗೆ ಸುತ್ತಿ (lamination), ಸ್ವಿಚ್, ಪ್ಲಗ್, ಬೋರ್ಡ್, ಹಿಡಿಕೆಗಳು ಮುಂತಾದ ಎಲ್ಲಾ ವಿದ್ಯುತ್ ಉಪಕರಣಗಳಲ್ಲಿ, ಯಾವುದೇ ಆಕಾರಕ್ಕೆ ತರಬಹುದಾದ್ದರಿಂದ ಸ್ಕ್ರೂ, ನಟ್‌ಗಳಿಂದ ಹಿಡಿದು ರೆಫ್ರಿಜರೇಟರ್, ಎ.ಸಿ, ಏರ್‌ಕೂಲರ್, ಫ್ಯಾನ್, ಕಂಪ್ಯೂಟರ್ ಬಿಡಿಭಾಗಗಳು, ಕೈಗಾರಿಕೆಗಳು, ಕಟ್ಟಡ ಸಾಮಗ್ರಿಗಳು, ಪ್ಯಾಕಿಂಗ್ ವಸ್ತುಗಳು, ಅಡುಗೆ ಮನೆಯ ವಸ್ತುಗಳು, ಫರ್ನಿಚರ್ಸ್, ಮೋಟಾರ್ ವಾಹನಗಳ ಬಿಡಿಭಾಗಗಳು, ಮತ್ತು ಕೃತಕ ಉಪಗ್ರಹಗಳಲ್ಲೂ ಬಳಕೆಯಾಗುತ್ತಿದೆ. ಮನೆಯ ಒಳಗೆ ಮತ್ತು ಹೊರಗೆ ಪ್ರತಿ ವಸ್ತುವು ಪ್ಲಾಸ್ಟಿಕ್ ಮಯವಾಗಿದೆ. ಇಷ್ಟೊಂದು ಪ್ರಯೋಜನಕಾರಿಯಾದ ಪ್ಲಾಸ್ಟಿಕ್ ಆವಿಷ್ಕಾರದ ಬಗ್ಗೆ ನೋಡೋಣ.

ಹದಿನೆಂಟನೆಯ ಶತಮಾನ, ಅದಕ್ಕಿಂತ ಹಿಂದೆ ಕೆಲವು ವಸ್ತುಗಳಾದ ಆಭರಣಗಳು, ಬಾಚಣಿಕೆ, ಕನ್ನಡಿಯ ಫ್ರೇಮ್, ಬಿಲಿಯರ್ಡ್ಸ್ ಬಾಲ್ ಮತ್ತು ಕೆಲವು ಐಷಾರಾಮಿ ಅಲಂಕಾರಿಕ ವಸ್ತುಗಳನ್ನು ಆನೆಗಳ ದಂತದಿಂದ ತಯಾರಿಸುತ್ತಿದ್ದರು. ಇದರಿಂದಾಗಿ ಆನೆಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿತು. ಆಗ ದಂತದಂತೆ ಇರುವ ಬಿಳಿಯ ವಸ್ತುವನ್ನು ತಯಾರಿಸುವವರಿಗೆ ಹತ್ತು ಸಾವಿರ ಡಾಲರ್ ಬಹುಮಾನ ಘೋಷಿಸಿದರು.

ಜಾನ್ ವೆಸ್ಲಿ ಹ್ಯಾಟ್ ಎಂಬಾತ 1863 ರಲ್ಲಿ ಸೆಲ್ಯುಲೋಸ್‌ನಿಂದ ಸೆಲ್ಲುಲಾಯ್ಡ್ ಎಂಬ ಬಿಳಿಯ ವಸ್ತುವನ್ನು ತಯಾರಿಸಿದ. ಇದನ್ನು ಕರ್ಪೂರದೊಂದಿಗೆ ಬೆರೆಸಿ ಬಿಳಿಯ ಹೊದಿಕೆಯನ್ನು ಬಿಲಿಯರ್ಡ್ಸ್ ಚೆಂಡುಗಳಿಗೆ ನೀಡಲಾಯಿತು. ನಂತರ ಆನೆಯ ದಂತದಂತಿರುವ ವಸ್ತುಗಳನ್ನು ತಯಾರಿಸಲಾಯಿತು. ಅಲೆಕ್ಸಾಂಡರ್ ಪಾರ್ಕ್ಸ್ ಮತ್ತು ಡೇನಿಯಲ್ ಸ್ಪಿಲ್ ಈ ಮಿಶ್ರಣವನ್ನು xylonite ಎಂದು ಕರೆದರು. ಆದರೆ ಹ್ಯಾಟ್ ಸಹೋದರರು ಇದನ್ನು ಪ್ಲಾಸ್ಟಿಸೈಸರ್ ಆಗಿ ಬಳಸಬಹುದು ಎಂದು ಕಂಡುಹಿಡಿದದ್ದು 1878 ರಲ್ಲೇ. ಹ್ಯಾಟ್ ಈ ಮಿಶ್ರಣವನ್ನು ಒತ್ತಡಕ್ಕೆ ಒಳಪಡಿಸಿ ಕಾಯಿಸಿ ಎರಕ ಹೊಯ್ಯಬಹುದು ಎಂದು ತೋರಿಸಿಕೊಟ್ಟದ್ದು. ಅದಾದ ಸುಮಾರು ಐವತ್ತು ವರ್ಷಗಳ ನಂತರ ಪ್ಲಾಸ್ಟಿಕ್ ಜನಸಾಮಾನ್ಯರ ಬಳಕೆಗೆ ಬಂದು, ಅದರ ದರ ತುಂಬಾ ಹೆಚ್ಚಿನದಾಗಿತ್ತು.

ಪ್ಲಾಸ್ಟಿಕ್ ಬಳಕೆಗೆ ಮೊದಲು ಆಹಾರ ಸಾಮಗ್ರಿಗಳನ್ನು ಮಣ್ಣಿನ ವಾಡೆಗಳಲ್ಲಿ, ತಗಡಿನ ಡಬ್ಬಗಳಲ್ಲಿ ಗೋಣಿ ಚೀಲಗಳಲ್ಲಿ ಶೇಖರಣೆ ಮಾಡುತ್ತಿದ್ದರು. ಹುಣಿಸೆಹಣ್ಣು, ಉಪ್ಪು, ಉಪ್ಪಿನಕಾಯಿ ಮುಂತಾದವುಗಳನ್ನು ಕಲ್ಲಿನ ಮರಿಗೆಗಳು, ಪಿಂಗಾಣಿ ಜಾಡಿಗಳಲ್ಲಿ ಇಡುತ್ತಿದ್ದರು. ಸಾಂಬಾರು, ರಸಂ ಮುಂತಾದ ಹುಳಿ ಮಿಶ್ರಿತ ಅಡುಗೆಗಳನ್ನು ಹಿತ್ತಾಳೆ ಪಾತ್ರೆಗಳಿಗೆ ಕಲಾಯಿ (ತವರದ ಲೇಪನ) ಮಾಡಿ ಬಳಸುತ್ತಿದ್ದರು. ಆಗ ಸ್ಟೀಲ್, ಇಂಡೋಲಿಯಂ ನಂತಹ ಮಿಶ್ರ ಲೋಹಗಳ ಪಾತ್ರೆಗಳು ಬಳಕೆಯಲ್ಲಿ ಇರಲಿಲ್ಲ. ವಿದ್ಯುತ್ ಸ್ವಿಚ್‌ಗಳನ್ನು ಫ್ಯೂಸ್ (fuse, MCB) ಇವುಗಳನ್ನು ಪಿಂಗಾಣಿಯಿಂದ ಮಾಡುತ್ತಿದ್ದರು. ಈ ಎಲ್ಲವನ್ನೂ ಪ್ಲಾಸ್ಟಿಕ್ ಸುಲಭ ಸಾಧ್ಯ ಮಾಡಿಸಿದೆ.

ಪ್ಲಾಸ್ಟಿಕ್‌ನಲ್ಲಿ ಎರಡು ವಿಧ. ಥರ್ಮೋ ಪ್ಲಾಸ್ಟಿಕ್ ಮತ್ತು ಥರ್ಮೋಸೆಟ್ಟಿಂಗ್ ಪ್ಲಾಸ್ಟಿಕ್ ಎಂದು. ಥರ್ಮೋ ಪ್ಲಾಸ್ಟಿಕ್‌ಗಳನ್ನು ಬಿಸಿ ಮಾಡಿದಾಗ ಯಾವುದೇ ರಾಸಾಯನಿಕ ಕ್ರಿಯೆಗಳಿಗೆ ಒಳಗಾಗದೆ ಮೃದುವಾಗಿ ಎಲ್ಲಾ ಆಕಾರಗಳಿಗೆ ಬದಲಿಸಬಹುದು. ಉದಾಹರಣೆಗೆ ಪಾಲಿಸ್ಟಿರಿನ್, ಟೆಫ್ಲಾನ್, ಕ್ರಿಲಿಕ್, ನೈಲಾನ್ ಮುಂತಾದವು. ಥರ್ಮೋಸೆಟ್ಟಿಂಗ್ ಪ್ಲಾಸ್ಟಿಕ್‌ಗಳನ್ನು ಒಂದೇ ಬಾರಿ ಮಾತ್ರ ಬಿಸಿ ಮಾಡಿ ಎರಕ ಹೊಯ್ದು ಆಕಾರಕ್ಕೆ ತರಬಹುದು. ನಂತರ ಬಿಸಿ ಮಾಡಿದರೆ ಆಕಾರ ಕಳೆದುಕೊಳ್ಳುತ್ತದೆ. ಉದಾಹರಣೆಗೆ ಬೆಕಲೈಟ್ (ಕು) ಎಪಾಕ್ಸಿ ರೆಸಿನ್, ವೀನೈಲ್ ಎಸ್ಟರ್ ರೆಸಿನ್ ಮುಂತಾದವು. ಥರ್ಮೋ ಸೆಟ್ಟಿಂಗ್ ಪ್ಲಾಸ್ಟಿಕ್ ಗಳಿಗಿಂತ ಥರ್ಮೋಪ್ಲಾಸ್ಟಿಕ್ ಬಳಕೆ ಕುಕ್ಕರ್ ಹ್ಯಾಂಡಲ್‌ಗಳು) ಪಾಲಿಯುರಿತೇನ್ (PUF- polyurethane refrigerator doors ಹೆಚ್ಚು ಮತ್ತು ಅದನ್ನು ಮರುಬಳಕೆ ಮಾಡಬಹುದು. ಆದರೆ ಪ್ಲಾಸ್ಟಿಕ್‌ನ್ನು ಸುಡಬಾರದು ಮತ್ತು ಭೂಮಿಯಲ್ಲಾಗಲಿ ನೀರಿನಲ್ಲಾಗಲಿ, ಸಮುದ್ರಗಳಲ್ಲಿ ಹಾಕಬಾರದು, ಏಕೆಂದರೆ ಅದು ಕರಗುವುದಿಲ್ಲ.

ಪ್ಲಾಸ್ಟಿಕ್ ಸುಟ್ಟಾಗ ಡೈಯಾಕ್ಸಿನ್ಸ್, ಫ್ಯೂರಾನ್ಸ್, ಪಾದರಸ, ಬಿಸಿಪಿ (poly chlorinated biphenyles) ಗಳು ಬಿಡುಗಡೆ ಆಗುತ್ತದೆ. ಡೈಯಾಕ್ಸಿನ್‌ಗಳು ವಾತಾವರಣದಲ್ಲಿ ಹಾಗೂ ನೀರಿನಲ್ಲಿ ಬೆರೆತು ಮನುಷ್ಯ ಮತ್ತು ಪ್ರಾಣಿಗಳ ದೇಹ ಸೇರಿ ಕ್ಯಾನ್ಸರ್, ಥೈರಾಯ್ಡ್, ಉಸಿರಾಟದ ತೊಂದರೆ ಉಂಟುಮಾಡುತ್ತದೆ. ಪಾದರಸ ಸಸ್ಯಗಳಲ್ಲಿ ಸೇರಿ ನಂತರ ಅದನ್ನು ಸೇವಿಸಿದವರ ದೇಹ ಸೇರಿ ವಿಷವಾಗಿ ಪರಿಣಮಿಸುತ್ತದೆ. ಹಾಗಾಗಿ ಪ್ಲಾಸ್ಟಿಕ್ ಸುಡಬಾರದು. ಪ್ಲಾಸ್ಟಿಕ್ ಮೃದುತ್ವಕ್ಕೆ ಕಾರಣವಾಗಿರುವ (phthalates) ಥಾಲೇಟ್‌ಗಳನ್ನು endocrine disrupters ನಿರ್ನಾಳ ಗ್ರಂಥಿಗಳ ಕಾರ್ಯಕ್ಕೆ ಅಡ್ಡಿಪಡಿಸುವಂತಹುದು ಎನ್ನುತ್ತಾರೆ. ಇದರಿಂದಾಗಿ ಬಂಜೆತನ, ನವಜಾತ ಶಿಶುಗಳಿಗೆ ಅಲರ್ಜಿ, ಆಸ್ತಮಾ, ಉಸಿರಾಟದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಮಣ್ಣಿನಲ್ಲಾಗಲಿ ನೀರಿನಲ್ಲಿ ಕರಗದೆ ಇರಲು ಕಾರಣ ಇದರ ಉದ್ದಸರಪಳಿಯ ರಚನೆ. ನೂರಾರು ವರ್ಷಗಳು ಕರಗದೇ ಹಾಗೆ ಇರುತ್ತದೆ. ನದಿ, ಕೊಳಗಳಲ್ಲಿ ಹತ್ತಿ ಅಥವಾ ರೇಷ್ಮೆ ಬಟ್ಟೆ ಹಾಕಿದರೆ ಕೊಳೆತು ಕರಗಿ ಹೋಗುತ್ತದೆ, ಆದರೆ ಇತ್ತೀಚೆಗೆ ತಯಾರಾಗುವ ಪ್ರತಿ ಬಟ್ಟೆಯಲ್ಲೂ ಕೃತಕವಾಗಿ ತಯಾರಾದ ನೈಲಾನ್ ಎಳೆ ಬೆರೆತಿರುತ್ತದೆ.

**ಪುಟ 9 ಕ್ಕೆ ➢**

# "ನನ್ನ ಶಾಲೆ ನನ್ನ ತೀರ್ಥಕ್ಷೇತ್ರ"
## ಕಾರ್ಯಕ್ರಮ ವರದಿ – ಬೆಂಗಳೂರು ಉತ್ತರ ಜಿಲ್ಲೆ

ದಿನಾಂಕ: 29–05–2022ರ ಭಾನುವಾರದಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯಿಂದ ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆಯಲ್ಲಿ ಶಾಲೆಯ ಆಡಳಿತ ಮಂಡಳಿ, ಶಿಕ್ಷಣ ವೃಂದ, ಕಛೇರಿ ಸಿಬ್ಬಂದಿ, ಶಾಲೆಯ ಹಳೆಯ ಮತ್ತು ಹಾಲಿ ವಿದ್ಯಾರ್ಥಿಗಳ ಸಹಯೋಗದೊಂದಿಗೆ "ನನ್ನ ಶಾಲೆ ನನ್ನ ತೀರ್ಥಕ್ಷೇತ್ರ" ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮವು ಉತ್ತರ ವಲಯ–4ರ ಅಧ್ಯಕ್ಷರಾದ ಶ್ರೀ ಶಿವಕುಮಾರಸ್ವಾಮಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಮಲ್ಲಿಕಾರ್ಜುನ ಪ್ರೌಢಶಾಲೆಯ ಮುಖ್ಯಶಿಕ್ಷಕರು ಹಾಗೂ ಕ.ರಾ.ಮಾ.ಶಿ.ಸಂಘದ ಬೆಂಗಳೂರು ಉತ್ತರಜಿಲ್ಲೆಯ ಅಧ್ಯಕ್ಷರು ಆದ ಶ್ರೀ ಗಂಗಪ್ಪನವರು ವೇದಿಕೆಯ ಮೇಲಿರುವ ಗಣ್ಯರು ಹಾಗೂ ಕಾರ್ಯಕ್ರಮದಲ್ಲಿ ನೆರೆದಿರುವ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ವೇದಿಕೆಯ ಮೇಲೆ ಆಸೀನರಾಗಿದ್ದ ಅತಿಥಿಗಳು ಹಾಗು ಗಣ್ಯರು ದೀಪವನ್ನು ಬೆಳಗುವ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ. ಜೋಶಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಘ ನಡೆದು ಬಂದ ದಾರಿ, ಸಂಘದ ಕಾರ್ಯಕ್ರಮ ಮತ್ತು ಅದರ ಉದ್ದೇಶ ಇವೆಲ್ಲವನ್ನೂ ಸವಿಸ್ತಾರವಾಗಿ ವಿವರಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹತ್ವದ ಕಾರ್ಯಕ್ರಮ ನನ್ನ ಶಾಲೆ ನನ್ನ ತೀರ್ಥಕ್ಷೇತ್ರದ ಮಹತ್ವವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ ಪಾಟೀಲರು ತಿಳಿಸುತ್ತಾ ರಾಮಾಯಣದಲ್ಲಿ ಶ್ರೀ ಆಂಜನೇಯ ಸ್ವಾಮಿಯ ಶಕ್ತಿಯನ್ನು ನೆನಪಿಸಿ ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಶ್ರೀಕಾಂತ್ ಸೀತಾರಾಮ್‌ರವರ ನಿಸ್ವಾರ್ಥ ಸೇವೆಯನ್ನು, ಮುಖ್ಯ ಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳ ಶ್ರಮದಾನವನ್ನು ಅಭಿನಂದಿಸಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾವಲ್‌ಭೈರಸಂದ್ರ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಶ್ರೀಯುತ ನಾರಾಯಣ್‌ರವರು "ನನ್ನ ಶಾಲೆ ನನ್ನ ತೀರ್ಥಕ್ಷೇತ್ರ" ಶೀರ್ಷಿಕೆಯನ್ನು ಶ್ಲಾಘಿಸಿ ಶಾಲೆಯನ್ನು ತೀರ್ಥಕ್ಷೇತ್ರ ಮಾಡುವಂತಹ ಕಾರ್ಯವನ್ನು ಶಾಲೆಯ ಆಡಳಿತ ಮಂಡಳಿ, ಶಿಕ್ಷಕವೃಂದ, ಹಳೆಯ ವಿದ್ಯಾರ್ಥಿಗಳು, ಸಮುದಾಯದೊಂದಿಗೆ ಆಗುತ್ತಿರುವುದನ್ನು ಕಂಡು ಅಭಿನಂದಿಸಿದರು. ನವ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳ ಕೊಡುಗೆ ಅಮೂಲ್ಯವಾದುದು ಎಂದು ತಿಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ವಲಯ–3ರ ಕಾರ್ಯದರ್ಶಿ ಶ್ರೀ ಎಂ.ವಿ. ಗಂಗಾಧರರವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ನನ್ನ ಶಾಲೆ ನನ್ನ ತೀರ್ಥಕ್ಷೇತ್ರ ಕಾರ್ಯಕ್ರಮವು ಶ್ರೀ ಮಲ್ಲಿಕಾರ್ಜುನ ಸ್ವಾಮಿ ಪ್ರೌಢಶಾಲೆಯಲ್ಲಿ ಯಶಸ್ವಿಯಾಗಿ ನಡೆಯಲು ನೆರವನ್ನು ದಾನದ ರೂಪದಲ್ಲಿ ನೀಡಿದ ದಾನಿಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಅಭಿನಂದಿಸಲಾಯಿತು. ದಾನಿಗಳನ್ನು ಮುಖ್ಯ ಶಿಕ್ಷಕರಾದ ಶ್ರೀ ಗಂಗಪ್ಪನವರು ಪರಿಚಯಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀಯುತ ಶ್ರೀಕಾಂತ್ ಸೀತಾರಾಮ್‌ರವರು ವಹಿಸಿದ್ದರು. ಬೆಂಗಳೂರು ವಿಭಾಗ ಪ್ರಮುಖರು ಮತ್ತು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ.ಜಿ ಕೂಡಗಿರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದಿಸಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್ಟರ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಶ್ರೀ ಎಂ.ವಿ ಗಂಗಾಧರ,** ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3

# ನಾಳೆ ಮಾಡುವುದನ್ನು ಇಂದೇ ಮಾಡಿ

ಅದೇ ತಾನೇ ರಾಜ ದರ್ಬಾರು ಮುಗಿದಿತ್ತು. ಧರ್ಮರಾಯ ತನ್ನ ಹೆಂಡತಿ ದ್ರೌಪದಿ ಹಾಗೂ ತಮ್ಮಂದಿರೊಡನೆ ಮಾತುಕತೆಯಾಡುತ್ತಿದ್ದ. ಯಾರೋ ಅತಿಥಿಗಳು ದೊರೆಯನ್ನು ಕಾಣಲು ಬಂದಿರುವರೆಂದು ದ್ವಾರಪಾಲಕ ಹೇಳಿದ. ಆ ಅತಿಥಿಗಳಿಗೆ ಮಾರನೆಯ ದಿನ ಬರಹೇಳಿ ಎಂದು ಯುಧಿಷ್ಠಿರ ಆಜ್ಞಾಪಿಸಿದ. ತಕ್ಷಣ ಭೀಮ ಹೊರಗೋಡಿದ. ಅರಮನೆಯೆದುರಿಗಿದ್ದ ದೊಡ್ಡ ಘಂಟೆಯನ್ನು ಬಾರಿಸತೊಡಗಿದ. ಏನಾದರೂ ವಿಶೇಷ– ಅಚ್ಚರಿಯ ಸಂಗತಿಯಿದ್ದಲ್ಲಿ ಮಾತ್ರ ಅದನ್ನು ಬಾರಿಸಲಾಗುತ್ತಿತ್ತು.

ಭೀಮಗಾತ್ರದ ಘಂಟೆಯನ್ನು ಭೀಮಸೇನ ಜೋರಾಗಿಯೇ ಬಾರಿಸಿದ್ದೇಕೆಂದು ಭೀಮನನ್ನು ಕೇಳಿದ. ಅವನು ಗಂಭೀರವಾಗಿ ಪ್ರಜೆಗಳನ್ನು ಉದ್ದೇಶಿಸಿ 'ನಮ್ಮ ಮಹಾರಾಜ ಯಮರಾಜನಿಗಿಂತಲೂ ಶ್ರೇಷ್ಠ!' ಎಂದು ಒಗಟಾಗಿ ಹೇಳಿದ.

'ಇದೇನು ಹೇಳುತ್ತಿರುವೆ ಭೀಮ?' ಬಿಡಿಸಿ ಹೇಳು' ಎಂದು ಕೇಳಿದ ಧರ್ಮರಾಯ.

'ಮಹಾರಾಜ, ಈಗ ತಾನೇ ನೀವು ನಿಮ್ಮನ್ನು ಕಾಣಲು ಬಂದ ಅತಿಥಿಗಳಿಗೆ ನಾಳೆ ಬರಹೇಳಿದಿರಿ. ಅದರರ್ಥ ನಾಳೆ ನೀವು ಬದುಕಿರುವಿರೆಂಬ ವಿಶ್ವಾಸ ನಮಗಿದೆ ಎಂದಾಯಿತು. ನಾಳೆ ತನ್ನ ಸ್ಥಿತಿ ಏನಾಗುವುದೆಂದು ಮಾನವ ಮಾತ್ರನಿಗೆ ಗೊತ್ತಿರದ ಸಂಗತಿ. ಕೇವಲ ಯಮನಿಗಷ್ಟೆ ಗೊತ್ತು. ಆದರೆ ನಾಳೆ ಈ ಭೂಮಿಯಲ್ಲಿ ಇದ್ದೇ ಇರುತ್ತೀರೆಂಬ ನಂಬಿಕೆ ನಿಮಗಿದೆ. ಹಾಗಾಗಿ ನೀವು ಯಮನಿಗಿಂತಲೂ ಶ್ರೇಷ್ಠ ಎಂದೆ' ಎಂದುತ್ತರಿಸಿದ ಭೀಮ.

**(ಕೃಪೆ : ಕೈತುತ್ತು)**

**ಜ್ಞಾನವು ನಾನು ನನ್ನದು ಎಂಬ ಅಜ್ಞಾನವನ್ನು ಹೋಗಲಾಡಿಸುತ್ತದೆ.**

➢ ಪುಟ 4 ರಿಂದ.....

ಇ) ಅದಕ್ಕಾಗಿ SCERT (State Council of Educational Research and Training) ವು ವಿವಿಧ ಭಾಗಿದಾರರೊಂದಿಗೆ ಮತ್ತು ಶಿಕ್ಷಕರೊಂದಿಗೆ ಮತ್ತು ಶಾಲೆಗಳೊಂದಿಗೆ ಸಮಾಲೋಚಿಸಿ ರಚಿಸುವುದು.

- SSSA ನಿರ್ಧರಿಸಿದಂತೆ ಸಾರ್ವಜನಿಕ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಗಾಗಿ ಎಲ್ಲಾ ಮೂಲಭೂತ ನಿಯಂತ್ರಕ ಮಾಹಿತಿಯನ್ನು ಸಾರ್ವಜನಿಕರಿಗೆ ಶಾಲೆಗಳೇ ಸ್ವಯಂ ತಿಳಿಸುವ ವಿಧಾನವನ್ನು ವ್ಯಾಪಕವಾಗಿ ಬಳಸಲಾಗುತ್ತದೆ.
- ಶಾಲಾ ಮಾನಕಗಳ ಅತ್ಯುತ್ತಮ ಅಭ್ಯಾಸಗಳನ್ನು ಆಧರಿಸಿ ಮಾಹಿತಿಯನ್ನು ಯಾವ ಆಯಾಮಗಳಲ್ಲಿ ಮತ್ತು ಸ್ವರೂಪದಲ್ಲಿ ಸ್ವಯಂ ಘೋಷಿಸಬೇಕು ಎಂದು SSSA ನಿರ್ಧರಿಸುತ್ತದೆ.
- ಎಲ್ಲಾ ಶಾಲೆಗಳು ನಿಖರವಾದ ಮಾಹಿತಿಗಳನ್ನು ಕಾಲ ಕಾಲಕ್ಕೆ ನವೀಕರಿಸುತ್ತ ಸಾರ್ವಜನಿಕ ಮತ್ತು ಶಾಲಾ ವೆಬ್‌ಸೈಟ್‌ಗಳಲ್ಲಿ ಪ್ರಾರಂಭಿಸಬೇಕು.
- ಸಾರ್ವಜನಿಕರಿಂದ ಅಥವಾ ಯಾರಿಂದಲಾದರು ದೂರುಗಳು ಬಂದಲ್ಲಿ ಅಥವಾ ಕುಂದುಕೊರತೆಗಳನ್ನು SSSA ಪರಿಹರಿಸಬೇಕು.
- SSSA ವು ಪ್ರಸ್ತುತ ಶಾಲೆಗಳು ನಿರ್ವಹಿಸುತ್ತಿರುವ ನಿಯಂತ್ರಣ ಅದೆಲ್ಲವುಗಳ ಭಾರವನ್ನು ಗಮನಾರ್ಹವಾಗಿ ತಗ್ಗಿಸುತ್ತದೆ.

ಈ ಮೌಲ್ಯಾಂಕನ ಕಾರ್ಯದಲ್ಲಿ SCERTಯು ನಿರಂತರವಾಗಿ NCERT ಯ ಜೊತೆಯಲ್ಲಿ ಸಂಪರ್ಕದಲ್ಲಿದ್ದು, ಮಗುವಿನ ಶೈಕ್ಷಣಿಕ ಗುಣಮಟ್ಟದ ಜೊತೆಯಲ್ಲಿ ಮಗುವಿನ ಆರೋಗ್ಯ, ಮೌಲ್ಯಮಾಪನದ ಕಾರ್ಯ ವಿಧಾನಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ ಕಾರ್ಯಕ್ಕೆ NAS (National Achievement Survey) ಮತ್ತು SAS (State Achievement Survey) ಯ ಸಹಕಾರದೊಂದಿಗೆ ರಾಷ್ಟ್ರೀಯ ಮೌಲ್ಯಂಕನ ಕೇಂದ್ರ PARAKA (Performance Assessment, Review and Analysis of Knowledge for Holistic Development) ವು ಸೂಚಿಸುವ ಮಾರ್ಗಸೂಚಿಯು ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಎಲ್ಲ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ.

ಅಂತಿಮವಾಗಿ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಆಕರ್ಷಕ ಆಯ್ಕೆಯಾಗುವಂತೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಾಗಿರಬೇಕು. ಜೊತೆಯಲ್ಲಿ ಶಾಲೆಗೆ ದಾಖಲಾದ ಮಕ್ಕಳನ್ನು ಮತ್ತು ಹದಿಹರೆಯದವರನ್ನು ಇಡೀ ಪ್ರಕ್ರಿಯೆಯಲ್ಲಿ ಮರೆಯಬಾರದು. ಮಕ್ಕಳು ವಿವಿಧ ಕಷ್ಟಕರ ಸಮಸ್ಯೆಗಳನ್ನು ವರದಿ ಮಾಡಲು ಸ್ಪಷ್ಟ, ಸುರಕ್ಷಿತ ಮತ್ತು ಪರಿಣಾಮಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರಬೇಕು. ಒಟ್ಟಾರೆ ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಸಮಯೋಚಿತ ಮತ್ತು ಚಿರಪರಿಚಿತವಾದಂತಹ ಕಾರ್ಯವಿಧಾನವಾದರೆ ಮಕ್ಕಳ ಪ್ರಗತಿಯಲ್ಲಿ ಸಹಕಾರಿಯಾಗುವುದು.

●

➢ ಪುಟ 7 ರಿಂದ.....

ಅತ್ಯಂತ ಕಡಿಮೆ ಬೆಲೆಗೂ ಲಭ್ಯವಾಗುತ್ತದೆ. ಅಂತಹ ಬಟ್ಟೆಗಳು ನೀರಿನಲ್ಲಿ ಇದ್ದ ಹಾಗೆ ಇದ್ದು ನೀರಿನ ಸೆಲೆಗಳನ್ನು ಮುಚ್ಚುತ್ತದೆ. ಮಣ್ಣಿನಲ್ಲಿ ಹಾಗೆ ಉಳಿದು ಭೂಮಿಯನ್ನು ಉಸಿರುಗಟ್ಟಿಸುತ್ತದೆ. ಇದು ಬಹಳ ಪ್ರಯೋಜನಕಾರಿಯಾದ ವಸ್ತು, ಆದರೆ ಸರಿಯಾಗಿ ನಿರ್ವಹಣೆ ಮಾಡದಿದ್ದರೆ ಸರಿಪಡಿಸಿಕೊಳ್ಳಲು ಆಗದಂತಹ ದುಷ್ಪರಿಣಾಮಗಳು ಆಗುತ್ತವೆ. ಬೆಲೆಯೂ ಅತ್ಯಂತ ಕಡಿಮೆ, ಎಲ್ಲರ ಕೈಗೂ ಎಟಕುವಂತಹುದು.

ಇಂತಹ ವಸ್ತುವನ್ನು ಉಪಯೋಗಿಸಿ ನಂತರ ನಿರ್ವಹಣೆ ಮಾಡುವುದು ಮತ್ತು ಇತರರಿಗೆ ಇದರ ನಿರ್ವಹಣೆಯನ್ನು ತಿಳಿಸಿಕೊಡಬೇಕಾಗಿರುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಹೇಗೆ ನಿರ್ವಹಿಸುವುದು ನೋಡೋಣ.

Everyone should follow three R's. 1) Reduce, 2) Reuse, 3) Recycle.

1) ಬಳಕೆ ಕಡಿಮೆ ಮಾಡುವುದು, 2) ಮರು ಬಳಕೆ ಮಾಡುವುದು, 3) ತ್ಯಾಜ್ಯದಿಂದ ಪುನರುತ್ಪಾದನೆ ಮಾಡುವುದು.

ಆದಷ್ಟೂ ಒಂದೇ ಬಾರಿಗೆ ಬಳಸಿ ಎಸೆಯುವಂತಹ ಕವರ್, ತಟ್ಟೆ, ಲೋಟ, ಕಪ್, ಚಮಚ ಇತ್ಯಾದಿಗಳ ಬಳಕೆ ಮಾಡಲೇ ಬಾರದು. ಅಕಸ್ಮಾತ್ ಮಾಡಿದರೆ ಅದನ್ನು ಒಣ ಪ್ಲಾಸ್ಟಿಕ್ ತ್ಯಾಜ್ಯದ ಪಟ್ಟಿಗೆ ಸೇರಿಸಬೇಕು. ಇವುಗಳನ್ನು ಒತ್ತಡ ಶಾಖ ಮುಂತಾದವುಗಳಿಂದ ಬೇರೆ ಆಕಾರಕ್ಕೆ ತರುತ್ತಾರೆ.

ಧವಸ ಧಾನ್ಯಗಳನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ಪ್ಯಾಕ್ ಮಾಡಿರುತ್ತಾರೆ. ಅಂತಹ ಕವರ್‌ಗಳನ್ನು ಕಸದ ಡಬ್ಬಕ್ಕೆ ಎಸೆಯದೆ ಮಡಚಿಟ್ಟು ಮತ್ತೊಂದನ್ನು ಪ್ಯಾಕ್ ಮಾಡಲು ಬಳಸಬಹುದು. ಕೆಲವು ದೊಡ್ಡ ಡಬ್ಬಗಳನ್ನು ಹೂ ಗಿಡಗಳನ್ನು ಬೆಳೆಸಲು ಕುಂಡಗಳಾಗಿ ಬಳಸಬಹುದು. ನೀರಿನ ಬಾಟಲ್‌ಗಳನ್ನು ಎಲ್ಲೆಂದರಲ್ಲಿ ಎಸೆಯದೆ ಜೋಡಿಸಿಟ್ಟು ಎಷ್ಟೊಂದು DIY (do it yourself) ಗಳಾಗಿ ಮಾಡಬಹುದು.

ತಮಿಳುನಾಡಿನಲ್ಲಿ ಒಬ್ಬ ಶಾಲಾ ಶಿಕ್ಷಕಿ ಈ ಬಾಟಲ್‌ಗಳನ್ನೆಲ್ಲಾ ಜೋಡಿಸಿ ಸಿಮೆಂಟ್ ಸೇರಿಸಿ ಆ ಶಾಲೆಯ ಶೌಚಾಲಯದ ಗೋಡೆಗಳನ್ನು ನಿರ್ಮಿಸಿದ್ದಾರೆ.

ಹೀಗೆ ಆಲೋಚನೆ ಮಾಡಿದರೆ ಎಷ್ಟೋ ಮಾರ್ಗಗಳ ಮೂಲಕ ಮರುಬಳಕೆ ಮಾಡಬಹುದು. ಕೆಲವು ಪ್ಲಾಸ್ಟಿಕ್‌ಗಳು ಬಳಸಲು ಯೋಗ್ಯವಾಗಿರುವುದಿಲ್ಲ. ಅಂತವುಗಳನ್ನು ಒಟ್ಟಿಗೆ ಸೇರಿಸಿ ಯಾವುದೇ ಕಾರಣಕ್ಕೂ ಆಹಾರ ಪದಾರ್ಥ, ಹಸಿಕಸ ಸೇರಿಸದೇ ಕಾರ್ಪೊರೇಷನ್, ಮುನಿಸಿಪಾಲಿಟಿ ಕಸ ತೆಗೆಯುವವರಿಗೆ ನೀಡಿದರೆ ಅವರು ಅದನ್ನು ಯೋಗ್ಯರೀತಿಯಲ್ಲಿ ನಿರ್ವಹಣೆ ಮಾಡಿ ಪುನರುತ್ಪಾದಿಸುತ್ತಾರೆ.

ಮನೆಯಲ್ಲಿ ಶೇಖರಣೆಯಾಗುವ ಹಸಿಕಸ, ತರಕಾರಿ ಸಿಪ್ಪೆ, ಉಳಿದ ಆಹಾರ ಪದಾರ್ಥಗಳನ್ನು ಗೊಬ್ಬರವಾಗಿ ಮಾರ್ಪಡಿಸಿ ಉಪಯೋಗಿಸಬಹುದು. ಆದರೆ ಇದರೊಂದಿಗೆ ಯಾವುದೇ ಪ್ಲಾಸ್ಟಿಕ್ ಕಸ ಸೇರಿಸಬಾರದು. ಇದು ಮುಂದಿನ ತಲೆಮಾರಿನವರಿಗೂ ಮಾದರಿಯಾಗಬೇಕು.

●

# ವಿದ್ಯಾರ್ಥಿ ಜ್ಞಾನ ಮಿತ್ರ

## ಗೋಪಾಲಕೃಷ್ಣ ಗೋಖಲೆ

ಗೋಪಾಲಕೃಷ್ಣ ಗೋಖಲೆಯವರು ಬಾಲ್ಯದಿಂದಲೂ ಪಾಂಡಿತ್ಯ, ಸೇವೆ, ತ್ಯಾಗಗಳ ಸಾಕಾರ ಮೂರ್ತಿ. ಸತ್ಯ, ದೇಶಪ್ರೇಮ, ಶ್ರೇಷ್ಠ ಆಚರಣೆಯನ್ನು ಜೀವನದಲ್ಲಿ ಪಾಲಿಸಿದ ಧೀಮಂತ ವ್ಯಕ್ತಿ. ಪ್ರಾಧ್ಯಾಪಕರಾಗಿ ಇಂಗ್ಲೀಷ್, ಗಣಿತ, ಇತಿಹಾಸ, ಅರ್ಥಶಾಸ್ತ್ರವನ್ನು ಕಲಿಸಿದರು. ಪತ್ರಿಕೋದ್ಯಮದಲ್ಲೂ ಸೇವೆ ಸಲ್ಲಿಸಿದವರು.

ಗೋವಿಂದ ರಾನಡೆಯವರ ಪ್ರೇರಣೆಯಿಂದ ಗೋಪಾಲಕೃಷ್ಣ ಗೋಖಲೆಯವರು ರಾಜಕೀಯ ಪ್ರವೇಶಿಸಿ, ಸ್ವದೇಶಿ ಚಳುವಳಿಗೆ ಪ್ರೋತ್ಸಾಹ ಕೊಟ್ಟರು. ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಕಡ್ಡಾಯವಾಗಿ ಸಿಗಬೇಕೆಂಬುದು ಇವರ ಆಶಯವಾಗಿತ್ತು. ಪರಮಧ್ಯೇಯವಾದ ಭಾರತೀಯ ಸ್ವಾತಂತ್ರ್ಯ ಸಾಧನೆಗೆ ಅಹಿಂಸಾ ರೀತಿಯ ಚಳುವಳಿ ಇವರ ಗುರಿಯಾಗಿತ್ತು. ವಿದ್ಯಾವಂತರ ಹಾಗೂ ಅಧಿಕಾರಿಗಳ ಸೇವೆಯು ದೇಶಕ್ಕೆ ಜನರಿಗೆ ಸಿಗುವಂತೆ ಮತ್ತು ಸಾರ್ವಜನಿಕ ಜೀವನದ ಶುದ್ಧೀಕರಣ ಆಗುವಂತಹ, ಭಾರತ ದೇಶ ಸೇವಕ ಸಂಘವನ್ನು 1905ರಲ್ಲಿ ಸ್ಥಾಪಿಸಿ ದೇಶದ ಎಲ್ಲಾ ಭಾಗಗಳಲ್ಲೂ ಹರಡುವಂತೆ ಮಾಡಿದರು. ಅಪ್ಪಟ ದೇಶಪ್ರೇಮ ಮೂಡಿಸುವುದು, ದೀನ ದಲಿತರ ಏಳಿಗೆಗಾಗಿ ಶ್ರಮಿಸುವುದು, ಗ್ರಾಮಾಂತರ ಪ್ರದೇಶದ ಹಿಂದುಳಿದವರ ಹಾಗೂ ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿಗಾಗಿ ದುಡಿಯುವುದು, ಕೃಷಿಕರು ಏಳಿಗೆ ಸಾಧಿಸುವುದು, ಔದ್ಯೋಗಿಕ ಮತ್ತು ವೈಜ್ಞಾನಿಕ ಶಿಕ್ಷಣಗಳ ಪ್ರಸಾರ ಇವು ಸಂಘದ ಉದ್ದೇಶಗಳಾಗಿದ್ದವು. ಇವುಗಳೆಲ್ಲವೂ ಸಾಕಾರಗೊಳ್ಳಲು ನಿರಂತರ ಮಾರ್ಗದರ್ಶನ ಮಾಡುತ್ತಿದ್ದರು.

ಗೋಖಲೆಯವರು ರಾಜಕೀಯಕ್ಕೆ ಆಧ್ಯಾತ್ಮಕ ಸ್ವರೂಪವನ್ನು ನೀಡಿದರು. ಜ್ಞಾನಯಜ್ಞ ಮತ್ತು ಮಾತೃಭೂಮಿಯ ಸೇವೆಗಳಲ್ಲಿ ತಮ್ಮ ಜೀವನವನ್ನು ಸವೆಸಿದರು. ಜಾತಿ, ಮತ, ಪಂಥಗಳ ಬೇಧ ಭಾವವನ್ನು ನಿವಾರಿಸಲು ನಿರಂತರ ಪ್ರಯತ್ನ ಮಾಡಿದರು. ಇವರು ಮಹಾತ್ಮಾಗಾಂಧಿಯವರ ರಾಜಕೀಯ ಗುರುಗಳಾಗಿದ್ದರು. ಇಂತಹ ದೇಶ ಪ್ರೇಮಿ ಗೋಖಲೆಯವರು ನೀಡಿದ ಉದಾತ್ತ ಚಿಂತನೆಗಳನ್ನು ನಾವೆಲ್ಲರೂ ಅನುಕರಿಸಬೇಕಾದುದು ನಮ್ಮ ಕರ್ತವ್ಯ. ಹಾಗಾದಾಗ ಮಾತ್ರ ನಾವು ಭಾರತೀಯರಾಗಿದ್ದಕ್ಕೂ ಸಾರ್ಥಕವಾಗುತ್ತದೆ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

## ಒಂದಿಷ್ಟು ಇತಿಹಾಸ

1. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ವಿರುದ್ಧ ಇಂಗ್ಲೀಷರೊಡನೆ ಹೋರಾಡಿದ ವೀರ ಮಹಿಳೆ ಯಾರು?
2. ಬ್ರಹ್ಮ ಸಮಾಜವನ್ನು ಸ್ಥಾಪಿಸಿದವರು ಯಾರು?
3. ದಯಾನಂದ ಸರಸ್ವತಿಯವರು ಯಾವ ಸಮಾಜವನ್ನು ಸ್ಥಾಪಿಸಿದರು?
4. 'ವೇದಗಳಿಗೆ ಹಿಂತಿರುಗಿ' ಎಂದು ಕರೆಕೊಟ್ಟವರು ಯಾರು?
5. ಪ್ರಾರ್ಥನಾ ಸಮಾಜವನ್ನು ಯಾರು ಸ್ಥಾಪಿಸಿದರು?

## ಜ್ಞಾನ ವಿಜ್ಞಾನ

1. ವಿಶ್ವ ಪರಿಸರ ದಿನಾಚರಣೆಯನ್ನು ಯಾವಾಗ ಆಚರಿಸುವರು?
2. ಪ್ರತಿವರ್ಷ ವಿಶ್ವಯೋಗ ದಿನಾಚರಣೆಯನ್ನು ಯಾವಾಗ ಆಚರಿಸಲಾಗುವುದು?
3. ರಕ್ತದ ಒತ್ತಡವನ್ನು ಅಳೆಯುವ ಉಪಕರಣ ಯಾವುದು?
4. ವಿದ್ಯುತ್ ಪ್ರವಾಹವನ್ನು ಅಳೆಯುವ ಸಾಧನ ಹೆಸರಿಸಿ.
5. ಬಾಹ್ಯಾಕಾಶದಲ್ಲಿ ಚಲಿಸಿದ ಪ್ರಥಮ ಭಾರತೀಯ ಯಾರು?

## ಮೇ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಕದಂಬ
2. ಮಯೂರವರ್ಮ
3. ಬದಾಮಿ ಕೋಟೆ
4. ರಾಮಚಂದ್ರ ಪುರಾಣಂ
5. ಸೂರ್ಯಕಾಂತ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಶಿವಮೊಗ್ಗ
2. ಮೂಡುಬಿದರೆ
3. ಮಹಾವೀರಾಚಾರ್ಯರು
4. ಶಿವನ ಸಮುದ್ರ
5. ಬೆಂಗಳೂರು

# ಪಠ್ಯಪುಸ್ತಕ – ಏಕೆ ಬೇಕು?

ರೋಹಿತ್ ಚಕ್ರತೀರ್ಥ

ಪಠ್ಯಪುಸ್ತಕಕ್ಕೆ ಎರಡು ಉದ್ದೇಶಗಳು. ಒಂದು – ಅದು ಇಡೀ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರು ಏನೇನನ್ನು ಬೋಧಿಸಬೇಕು, ವಿದ್ಯಾರ್ಥಿಗಳು ಏನೇನು ಕಲಿಯಬೇಕು ಎಂಬುದನ್ನು ನಿರ್ದೇಶಿಸುತ್ತದೆ. ಒಂದು ರೀತಿಯಲ್ಲಿ ಇದು ವಾಹನ ಸಾಗಲು ಇರುವ ಹೆದ್ದಾರಿಯಂತೆ. ವಿದ್ಯಾರ್ಥಿಯು ತನ್ನ ಹತ್ತು–ಹನ್ನೆರಡು ವರ್ಷಗಳ ವಿದ್ಯಾಭ್ಯಾಸದಲ್ಲಿ ಒಂದಷ್ಟು ಸಂಗತಿಗಳನ್ನು ಕಲಿಯುತ್ತಾನೆ. ಆ ಕಲಿಕೆಯು ಅವಿಚ್ಛಿನ್ನವಾಗಿರುವಂತೆ ಮಾಡುವ ಸಲಕರಣೆಯೇ ಪಠ್ಯಪುಸ್ತಕ.

ಪಠ್ಯಪುಸ್ತಕವು ವಿದ್ಯಾರ್ಥಿಯ ವಯೋಮಾನಕ್ಕೆ ತಕ್ಕ ವಿಷಯಗಳನ್ನು ಕೊಡಬೇಕು. ಸರಳ ವಿಷಯಗಳಿಂದ ಸಂಕೀರ್ಣ ಸಂಗತಿಗಳತ್ತ ಸಾಗಬೇಕು. ಅಧ್ಯಾಯಗಳ ನಡುವೆ ಅಂತರಸಂಬಂಧವಿರಬೇಕು. ಮಾತ್ರವಲ್ಲ, ಒಂದು ಪಠ್ಯಪುಸ್ತಕಕ್ಕೂ ಇನ್ನೊಂದಕ್ಕೂ ನಡುವೆ ಕೊಂಡಿ ಇರಬೇಕು. ಉದಾಹರಣೆಗೆ ಇತಿಹಾಸ ಪಠ್ಯದಲ್ಲಿ ವಿದ್ಯಾರ್ಥಿಯು ವೇದಕಾಲದ ಬಗ್ಗೆಯೋ ಶುಲ್ಬ ಸೂತ್ರಗಳ ಬಗ್ಗೆಯೋ ಓದಿಕೊಳ್ಳುವ ಸಮಯದಲ್ಲಿ ಆತನಿಗೆ ಗಣಿತದಲ್ಲಿ ಶುಲ್ಬ ಗಣಿತದ ವಿವರಗಳಿದ್ದರೆ ಅದು ಆತನ ಕಲಿಕೆಗೆ ಹೊಸ ಆಯಾಮಗಳನ್ನು ಜೋಡಿಸುತ್ತದೆ. ತಾನು ಓದುವ ಗಣಿತ, ವಿಜ್ಞಾನ, ಇತಿಹಾಸ, ಭಾಷೆ ಇತ್ಯಾದಿಗಳು ಒಂಟಿ ದ್ವೀಪಗಳಲ್ಲ; ಅವೆಲ್ಲಕ್ಕೂ ನಡುವೆ ಸಂಬಂಧವಿದೆ ಎಂಬ ಜ್ಞಾನ ವಿದ್ಯಾರ್ಥಿಗಾಗುತ್ತದೆ. ಪಠ್ಯಪುಸ್ತಕಗಳಲ್ಲಿ ಕೊಡುವ ವಸ್ತು–ವಿಷಯಗಳು ಆಯಾ ಶೈಕ್ಷಣಿಕ ವರ್ಷ ಅಥವಾ ಅವಧಿಗಳಲ್ಲಿ ಮುಗಿಸಲು ಸಾಧ್ಯವಾಗುವಂತಿರಬೇಕು. ಅಲ್ಲಲ್ಲಿ ಕೋಷ್ಟಕ, ನಕ್ಷೆ, ಬಾಕ್ಸ್‌ಗಳು ಕಾಣಿಸಬೇಕು. ವಿದ್ಯಾರ್ಥಿಯೇ ಮಾಡಬಹುದಾದ ಚಟುವಟಿಕೆಗಳನ್ನು ಅಲ್ಲಲ್ಲಿ ಕೊಡಬೇಕು.

ಹಾಗೆ ನೋಡಿದರೆ, ಭಾರತದಲ್ಲಿ ಪಠ್ಯಪುಸ್ತಕಗಳ ಒಂದು ಸಂಪ್ರದಾಯ ಶುರುವಾದದ್ದು ತೀರ ಇತ್ತೀಚೆಗೆ. ಹೆಚ್ಚೆಂದರೆ ಅವುಗಳಿಗೆ ನೂರೈವತ್ತು ವರ್ಷಗಳ ಇತಿಹಾಸವಿದೆ. ಭಾರತದಲ್ಲಿ ಮೆಕಾಲೆ ಪ್ರಣೀತ ಶಿಕ್ಷಣ ಸಾರ್ವತ್ರಿಕವಾಗಿ ಜಾರಿಗೆ ಬಂದ ಮೇಲೆ ಪಠ್ಯಪುಸ್ತಕಗಳನ್ನು ರಚಿಸುವ ಅಗತ್ಯ ಕಂಡುಬಂತು. ಅದನ್ನು ಬಹಳಷ್ಟು ಮಟ್ಟಿಗೆ ತುಂಬಿದ್ದು ಜರ್ಮನಿಯ ಮಿಷನರಿಗಳು. ತಂಡೋಪತಂಡವಾಗಿ ಬಂದ ಇವರು ಭಾರತದ ಹಲವು ಭಾಗಗಳಲ್ಲಿ ಹರಡಿಹೋಗಿ, ಅಲ್ಲಿನ ಸ್ಥಳೀಯ ಭಾಷೆಗಳನ್ನು ಕಲಿತು, ದೇಸೀ ಜ್ಞಾನವನ್ನು ಭಾಷಾಂತರಿಸಿ, ನಂತರ ದೇಸೀ ಜ್ಞಾನ ಹಾಗೂ ವಿದೇಶೀ ಕಲಿಕಾಪದ್ಧತಿಗಳನ್ನು ಜೊತೆಯಾಗಿಟ್ಟು ಪಠ್ಯಗಳನ್ನು ಬರೆದರು. ಒಂದಷ್ಟನ್ನು ತಾವೇ ಬರೆದು ಸಿದ್ಧಪಡಿಸಿದರು. ಮತ್ತೆ ಕೆಲವೊಂದನ್ನು ಸ್ಥಳೀಯ ವಿದ್ವಾಂಸರಿಂದ ಬರೆಸಿದರು. ಭಾರತದಲ್ಲಿ ಮೊದಲ ಬಾರಿಗೆ ವಿಜ್ಞಾನ, ಸಮಾಜವಿಜ್ಞಾನ, ಗಣಿತ ಮುಂತಾದ ವಿಷಯಗಳಿಗೆ ಪಠ್ಯಪುಸ್ತಕಗಳು ಬರೆಯಲ್ಪಟ್ಟವು. ಇದಕ್ಕಾಗಿ ಮಿಷನರಿಗಳು ಕಲಾವಿದರಿಂದ ಚಿತ್ರಗಳನ್ನು ಬರೆಸಿದರು. ಪಠ್ಯಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮುದ್ರಿಸಿ ಹಂಚುವುದಕ್ಕಾಗಿ ಮುದ್ರಣಾಲಯಗಳನ್ನು ಸ್ಥಾಪಿಸಿದರು. ನೂರಾರು ಶಾಲೆಗಳನ್ನು ತೆರೆದರು.

ಇಲ್ಲೊಂದು ಸಂಗತಿಯನ್ನು ಗಮನಿಸಬೇಕು: ಭಾರತದಲ್ಲಿ ಬೆಳೆದುಬಂದ ಶೈಕ್ಷಣಿಕ ವ್ಯವಸ್ಥೆಗೂ ರಿಲಿಜನ್‌ಗಳಿಗೂ ನೇರವಾದ ಸಂಬಂಧವಿದೆ. ಭಾರತದಲ್ಲಿ ಪಠ್ಯಪುಸ್ತಕಗಳಿಗೆ ಸಿಕ್ಕ ಮರ್ಯಾದೆಗೆ ಯುರೋಪಿನ ಚರ್ಚುಗಳಲ್ಲಿ ಪವಿತ್ರಗ್ರಂಥಕ್ಕೆ ಸಿಗುತ್ತಿದ್ದ ಮಾನ್ಯತೆಯ ಹಿನ್ನೆಲೆಯೂ ಇದೆ. ಪಠ್ಯಪುಸ್ತಕದಲ್ಲಿ ಬಂದಿರುವುದೇ ಅಂತಿಮ, ಅದನ್ನು ಕಣ್ಣುಮುಚ್ಚಿ ನಂಬಿಬಿಡಬೇಕು, ಪ್ರಶ್ನೆ ಮಾಡಬಾರದು, ವರ್ಷದುದ್ದಕ್ಕೆ ಪಠ್ಯವನ್ನು ಓದಿ ವರ್ಷಾಂತ್ಯದಲ್ಲಿ ಅದರ ಮೇಲೆ ಮೂರು ತಾಸುಗಳ ಪರೀಕ್ಷೆ ಬರೆಯಬೇಕು, ಬರೆದ ಉತ್ತರಗಳಿಗೆ ಸರಿಯಾದ ಅಂಕಗಳನ್ನು ಕೊಡುವ – ಮೌಲ್ಯಮಾಪನ ಮಾಡುವ ಜವಾಬ್ದಾರಿ ಶಿಕ್ಷಕರದು – ಎಂಬ ಎಲ್ಲ ಅಂಶಗಳಿಗೂ ರಿಲಿಜನ್‌ನ ಹಿನ್ನೆಲೆ ಇದೆ ಎಂದರೆ ಅಚ್ಚರಿಯಾದೀತು. ಪಠ್ಯಪುಸ್ತಕದಲ್ಲಿ ಬಂದ ಯಾವೊಂದು ಅಂಶವನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಕು ಎಂಬುದನ್ನು ನಮಗೆ ತಿಳಿಸಿಕೊಟ್ಟಿರುವುದು ಇಂದಿನ ಶಿಕ್ಷಣ ಪದ್ಧತಿಯಲ್ಲ; ಜನರನ್ನು ಮಾತ್ರವಲ್ಲದೆ ಅವರ ಬೌದ್ಧಿಕತೆಯನ್ನೂ ನೂರಾರು ವರ್ಷ ಆಳಿದ ಬ್ರಿಟಿಷ್ ಶಿಕ್ಷಣ ಮತ್ತು ಅದನ್ನು ನಿಯಂತ್ರಿಸಿದ ರಿಲಿಜನ್ ವ್ಯವಸ್ಥೆ.

ಹಾಗಾದರೆ ಭಾರತದಲ್ಲಿ ಪಠ್ಯಪುಸ್ತಕಗಳೇ ಇರಲಿಲ್ಲವೆ? ಇರಲಿಲ್ಲ ಎಂದು ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ವೈದಿಕ ಶಾಸ್ತ್ರಗಳಲ್ಲಿ ಪಾರಂಗತರಾಗಬೇಕಾದರೆ ಒಂದಷ್ಟು ಗ್ರಂಥಗಳನ್ನು ಅಭ್ಯಾಸ ಮಾಡಲೇಬೇಕು. ಉದಾಹರಣೆಗೆ ಮಾಧ್ವ ಸಿದ್ಧಾಂತದಲ್ಲಿ ವಿದ್ವಾಂಸ ಎನ್ನಿಸಿಕೊಳ್ಳಬೇಕಾದರೆ 'ನ್ಯಾಯಸುಧಾ' ಎಂಬ ಗ್ರಂಥವನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡಿರಬೇಕು ಎಂದು ಮಾಧ್ವಮಠಗಳು ವಿದ್ಯಾರ್ಥಿಗಳಿಗೆ ತಾಕೀತು ಮಾಡಿದ ಹಾಗೆ. ಆದರೆ ಅದೊಂದೇ ಮಾಧ್ವಸಿದ್ಧಾಂತವನ್ನು ಅರಿಯಲು ಪ್ರಮಾಣಗ್ರಂಥವಲ್ಲ ಎಂಬುದೂ ನಿಜವೇ. ಅದರ ಜೊತೆ ಜೊತೆಗೇ ವಿದ್ಯಾರ್ಥಿಯು ಇನ್ನೂ ಅನೇಕ ಗ್ರಂಥಗಳ ಪಠಣ, ಅಧ್ಯಯನ, ಸಂಶೋಧನ ಮಾಡಬೇಕಾಗುತ್ತದೆ. ಆದರೆ ಅವೆಲ್ಲವೂ "ಪಠ್ಯ"ಗಳೇ ಹೊರತು "ಪಠ್ಯಪುಸ್ತಕ"ಗಳಲ್ಲ. ಇವೆರಡಕ್ಕೂ ಏನು ವ್ಯತ್ಯಾಸ, ಕೇಳಬಹುದು. ಒಂದು ಪುಸ್ತಕವನ್ನು ಕೇವಲ "ಪಠ್ಯ"ವಾಗಿ ನೋಡುವಾಗ, ತನ್ನ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಅದನ್ನೊಂದು ಜ್ಞಾನದ ಆಕರವಾಗಿ ನೋಡಲು ವಿದ್ಯಾರ್ಥಿಗೆ ಅವಕಾಶವಿದೆ. ಪಠ್ಯಪುಸ್ತಕದಲ್ಲಿ ಇರುವ ತಪ್ಪನ್ನು ಕೂಡ ಆತ ಎಷ್ಟೋ ಸಲ ಸರಿಯೆಂದೇ ಭ್ರಮಿಸಿ, ಕಲಿತು ಮುಂದಕ್ಕೆ ಹೋಗಬೇಕಾಗುತ್ತದೆ.

ಹಾಗಾದರೆ ಭಾರತದ ಶೈಕ್ಷಣಿಕ ವಲಯದಲ್ಲಿ ಪಠ್ಯಪುಸ್ತಕಗಳನ್ನು ಬಿಟ್ಟುಬಿಡೋಣವೆ? ಸದ್ಯಕ್ಕೆ ಅಷ್ಟು ಬೌದ್ಧಿಕ ಪಕ್ವತೆ ನಮಗೆ ಬಂದಿಲ್ಲ. ಶಾಲಾಹಂತದಲ್ಲಿ ಇನ್ನೂ ಪಾಠಪುಸ್ತಕಗಳನ್ನೇ ಪವಿತ್ರಗ್ರಂಥಗಳೆಂದು ಕಣ್ಣಿಗೊತ್ತಿ ಓದುವ ಮುಗ್ಧ ವಿದ್ಯಾರ್ಥಿಬಳಗವಿದೆ. ಹಾಗೆಯೇ ಪಠ್ಯಪುಸ್ತಕಗಳನ್ನು ರಿಲಿಜನ್ ಗ್ರಂಥಗಳೋ ಎಂಬಷ್ಟು ಶ್ರದ್ಧೆಯಿಂದ ಪಾಠ ಮಾಡುವ ಶಿಕ್ಷಕ ಬಳಗವೂ ಇದೆ. ವಿದ್ಯಾಭ್ಯಾಸದ ಹಂತದಲ್ಲಿ ಹಲವು ಮೂಲಗಳನ್ನು ಹುಡುಕಿನೋಡಿ ವಿದ್ಯೆಯನ್ನು ಅರಸುವ ಪ್ರೌಢತೆ ಇನ್ನೂ ನಮ್ಮಲ್ಲಿಲ್ಲ. ಶಾಲಾಹಂತದಲ್ಲೇನು, ಕಾಲೇಜು ಯೂನಿವರ್ಸಿಟಿಗಳಲ್ಲಿ ಕೂಡ ಶಿಕ್ಷಕರು ಕೊಡುವ ನೋಟ್ಸ್‌ಗಳಿಗೇ ಚಾತಕಪಕ್ಷಿಗಳಂತೆ ಕಾಯುವ ವಿದ್ಯಾರ್ಥಿವೃಂದ ಇರುವುದು ಸುಳ್ಳಲ್ಲವಲ್ಲ! ಹಾಗಿರುವಾಗ ನಾವು ಕೊಡುವ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಲ್ಲಿ "ಪಠ್ಯ"ಗಳನ್ನು ಓದುವ ಪ್ರಬುದ್ಧತೆಯನ್ನು ತರುವ ಹಾಗಿರಬೇಕು. ಅವರಲ್ಲಿ ಜ್ಞಾನದ ಬಗ್ಗೆ ಕುತೂಹಲ, ಶ್ರದ್ಧೆಗಳನ್ನು ಮೂಡಿಸುವಂತಿರಬೇಕು. ಮಾಹಿತಿಯನ್ನಷ್ಟೇ ತುಂಬಿಕೊಳ್ಳದೆ, ಮಾಹಿತಿಯನ್ನು ಸಂಸ್ಕರಿಸಿ ಜ್ಞಾನವನ್ನು ಕಡೆದು ತೆಗೆಯುವ ಸಾಮರ್ಥ್ಯವನ್ನು ಅವರಲ್ಲಿ ಮೂಡಿಸುವಂತಿರಬೇಕು. ಇಂದಿನ ಎಲ್ಲ ಬಗೆಯ ತಂತ್ರಜ್ಞಾನಗಳನ್ನೂ ಬಳಸಿಕೊಳ್ಳುವ ಚಾಕಚಕ್ಯತೆಯೂ ಪಠ್ಯಪುಸ್ತಕಗಳಿಗೆ ಇರಬೇಕು. ಅರ್ಥಾತ್, ಪಠ್ಯಪುಸ್ತಕಗಳಲ್ಲಿ ಹಾಳೆಗಳ ಸಂಖ್ಯೆ ಕಡಿಮೆಯಾಗಿ, ವಿದ್ಯಾರ್ಥಿಯು ಬೇರೆ ಹತ್ತುಹಲವು ಮೂಲಗಳಿಂದ ಜ್ಞಾನವನ್ನು ಪಡೆಯಲು ಅದೇ ಪಠ್ಯಪುಸ್ತಕವು ಸಹಾಯ ಮಾಡುವಂತಿರಬೇಕು.

ಅಂತಿಮವಾಗಿ ಪಠ್ಯಪುಸ್ತಕದ ಮೂಲ ಆಶಯ ಜ್ಞಾನವನ್ನು ವರ್ಗಾಯಿಸುವುದಷ್ಟೇ ಅಲ್ಲ, ವ್ಯಕ್ತಿತ್ವ ನಿರ್ಮಾಣ ಮಾಡುವುದು ಕೂಡ. ವಿದ್ಯಾರ್ಥಿ ಯಾವ್ಯಾವ ವಿಚಾರಗಳನ್ನು ಕಲಿತ, ಯಾವ ಮಾಹಿತಿಯನ್ನು ಪಡೆದ ಎಂಬುದರ ಜೊತೆಗೆ, ಆ ಪಠ್ಯಪುಸ್ತಕಗಳಿಂದ ಯಾವ ಮೌಲ್ಯವನ್ನು ಕಲಿತು ಬದುಕಿನಲ್ಲಿ ಅಳವಡಿಸಿಕೊಂಡ ಎಂಬುದೂ ಮುಖ್ಯವೇ. ಆದರೆ ಅಂತಹ ಪಠ್ಯಪುಸ್ತಕಗಳನ್ನು ರಚಿಸುವುದು ನಮ್ಮ ಗುರಿಯಾಗಬೇಕು. ಇಲ್ಲವಾದರೆ ಬೆರಳ ತುದಿಯಲ್ಲಿ ಮಾಹಿತಿ ಸಿಗಬಲ್ಲ ಇಂದಿನ ಆಧುನಿಕ ಯುಗದಲ್ಲಿ ಪಠ್ಯಪುಸ್ತಕ ವಿದ್ಯಾರ್ಥಿಗೆ ಪ್ರಸ್ತುತವಾಗುವುದು ಹೇಗೆ?

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-06-2022 Date of Posting 20th or 21st of every month Posted at Periodical Rate

# ಮಾಧ್ಯಮಿಕ ಶಿಕ್ಷಕ ಸಂಘದ ಮನವಿಗೆ ಸ್ಪಂದಿಸಿದ ಡಿಡಿಪಿಐ




ಸರ್ಕಾರಿ ಪ್ರೌಢಶಾಲಾ ಶಿಕ್ಷಕರು 10, 15, 20 ,25 ಮತ್ತು 30 ವರ್ಷ ಸೇವೆ ಪೂರೈಸಿದ ಶಿಕ್ಷಕರಿಗೆ ನೀಡುವ ವಿಶೇಷ ವೇತನ ಬಡ್ತಿಗಳನ್ನು ಮಂಜೂರಿಸಲು ಹಿಂದಿನ 5 ವರ್ಷದ ಸೇವಾವಧಿಯ ಕಾರ್ಯನಿರ್ವಹಣಾ ವರದಿಗಳನ್ನು ಕೇಳಲಾಗುತ್ತಿದ್ದು, ಈ ವರದಿಗಳನ್ನು ಲಭ್ಯ ಪಡಿಸುವಾಗ ಅಧಿಕಾರಿಗಳ ವರ್ಗಾವಣೆ ನಿವೃತ್ತಿ ಕಾರಣದಿಂದ ಶಿಕ್ಷಕರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರಿನ ಆಯುಕ್ತರ ಕಚೇರಿಯ ನಿರ್ದೇಶಕರು (ಪ್ರೌಢಶಿಕ್ಷಣ ವಿಭಾಗ)ರವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮೂಲ ಸೇವಾ ಪುಸ್ತಕ ನೋಡಿ ಈ ವರದಿ ಸಲ್ಲಿಸಲು ತಿಳಿಸಿರುವುದರಿಂದ ವಿಶೇಷ ರಹಸ್ಯ ವರದಿ (ವಿಶೇಷ ದೃಢೀಕರಣ ಪ್ರಮಾಣ ಪತ್ರ) ಯ ಆಧಾರದ ಮೇಲೆ ಪ್ರೌಢಶಾಲಾ ಶಿಕ್ಷಕರಿಗೆ ವಿಶೇಷ ವೇತನ ಬಡ್ತಿಗಳನ್ನು ಮಂಜೂರಿಸಿ ಶಿಕ್ಷಕರಿಗೆ ಅನುಕೂಲ ಮಾಡಿಕೊಡಿಸುವಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಕಲಬುರಗಿ ವತಿಯಿಂದ ಮನವಿ ಸಲ್ಲಿಸಿ ಆಗ್ರಹಿಸಲಾಯಿತು.

ಮನವಿಗೆ ತಕ್ಷಣವೇ ಸ್ಪಂದಿಸಿದ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಅಶೋಕ ಭಜಂತ್ರಿ ರವರು ಈ ಕುರಿತು ಸೂಕ್ತ ಕ್ರಮವಹಿಸಿ 2–3 ದಿನಗಳಲ್ಲಿ ಶಿಕ್ಷಕರಿಗೆ ತೊಂದರೆ ಆಗದಂತೆ ಆದೇಶ ಹೊರಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ವಿಭಾಗ ಪ್ರಮುಖ ಶ್ರೀಮಹೇಶ್ ಬಸರಕೋಡ್ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಪಾಟೀಲ್ ಪ್ರಧಾನ ಕಾರ್ಯದರ್ಶಿ ಸಂಜೀವ್ ಕುಮಾರ್ ಪಾಟೀಲ್ ಉಪಾಧ್ಯಕ್ಷ ಚಂದ್ರಶೇಖರ್ ಗೋಸಾಲ್ ಶಂಕರಲಿಂಗ ಕಲ ಶೆಟ್ಟಿ ಉಪಸ್ಥಿತರಿದ್ದರು.

ಕಾಶ್ಮೀರದಲ್ಲಿ ಶಾಲಾ ಶಿಕ್ಷಕಿಯನ್ನು ಉಗ್ರಗಾಮಿಗಳು ಗುಂಡಿಕ್ಕಿ ಕೊಲೆ ಮಾಡಿದ್ದು, ದೇಶದ್ರೋಹಿಗಳಿಗೆ ಶಿಕ್ಷೆಯಾಗಲಿ ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ವಿಭಾಗದ ಸದಸ್ಯರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.








"ನನ್ನ ಶಾಲೆ ನನ್ನ ತೀರ್ಥ ಕ್ಷೇತ್ರ" ಬೆಂಗಳೂರು ಉತ್ತರ ಜಿಲ್ಲೆ. ಸಮಾರೋಪ ಮತ್ತು ಸಹಕಾರ ಸ್ಮರಣೆ ಕಾರ್ಯಕ್ರಮ.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com